# ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

(ಈ ಹಿಂದೆ ಕರೆಯಲಾಗುತ್ತಿದ್ದ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ)

# 7ನೇ ವಾರ್ಷಿಕ ವರದಿ

# 2012–13

ನೋಂದಾಯಿತ ಕಛೇರಿ :

ನಂ:4, 12ನೇ ಮುಖ್ಯ ರಸ್ತೆ, ಮೌಂಟ್ ಕಾರ್ಮೆಲ್ ಕಾಲೇಜು ಎದುರು,

ವಸಂತನಗರ, ಬೆಂಗಳೂರು –560052

# ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

(ಈ ಹಿಂದೆ ಕರೆಯಲಾಗುತ್ತಿದ್ದ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ)

## ಪರಿವಿಡಿ


| ಕ್ರ.ಸಂ | ವಿಷಯ ಸೂಚಿ | ಪುಟ ಸಂಖ್ಯೆ |
|---|---|---|
| 1 | ನಿರ್ದೇಶಕ ಮಂಡಳಿಯ ವಿವರಗಳು | 1 |
| 2 | 7 ನೇ ವಾರ್ಷಿಕ ಮಹಾ ಸಭೆಯ ಸೂಚನೆ | 2 |
| 3 | ಸದಸ್ಯರಿಗೆ ನಿರ್ದೇಶನ ವರದಿ | 3-10 |
| 4 | ಮಹಾಲೇಖಪಾಲಕರು ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾದ ಟೀಕೆಗಳು | 11 |
| 5 | ಸದಸ್ಯರಿಗೆ ಲೆಕ್ಕ ಪರಿಶೋಧಕರ ವರದಿ | 12-17 |
| 6 | 31.03.2013 ರಲ್ಲಿದ್ದಂತೆ ಜಮಾ ಖರ್ಚು ಪಟ್ಟಿ | 18 |
| 7 | 31.03.2013 ಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ತಃಖ್ತೆ | 19 |
| 8 | ಲೆಕ್ಕಚಾರದ ನೀತಿಗಳು ಮತ್ತು ಲೆಕ್ಕ ಪತ್ರದ ಭಾಗವಾದ ಅನುಸೂಚಿ | 20-33 |
| 9 | ಜಮಾ ಖರ್ಚು ಪಟ್ಟಿಯ ಸಾರಾಂಶ ಮತ್ತು ಕಂಪನಿಯ ಸಾಮಾನ್ಯ ವ್ಯವಹಾರದ ಚಿತ್ರಣ | 34 |

## ನಿರ್ದೇಶಕ ಮಂಡಳಿ

| | | |
|---|---|---|
| 1. | ಶ್ರೀ ಬಸವರಾಜ್. ಎಸ್.ಸಿ,<br>ಕರ್ನಾಟಕ ಮಹರ್ಷಿ ವಾಲ್ಮೀಕಿ<br>ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ. | ಅಧ್ಯಕ್ಷರು |
| 2. | ಶ್ರೀ ಎನ್. ಮುಂಜುನಾಥ ಪ್ರಸಾದ್, ಭಾ.ಆ.ಸೇ<br>ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ. | ನಿರ್ದೇಶಕರು |
| 3. | ಶ್ರೀಮತಿ ಸದಿಯಾ ಸುಲ್ತಾನ, ಕೆ.ಎ.ಎಸ್(ಸೂಪರ್ ಟೈಮ್ ಸ್ಕೇಲ್),<br>ನಿರ್ದೇಶಕರು,<br>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ. | ನಿರ್ದೇಶಕರು |
| 4. | ಶ್ರೀ ರಾಮಚಂದ್ರಯ್ಯ,<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ,<br>ಕರ್ನಾಟಕ ಸರ್ಕಾರ. | ನಿರ್ದೇಶಕರು |
| 5. | ಶ್ರೀಮತಿ ಎಲ್.ರಾಜೇಶ್ವರಿ,<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ,<br>ಕರ್ನಾಟಕ ಸರ್ಕಾರ. | ನಿರ್ದೇಶಕರು |
| 6. | ಶ್ರೀ.ಕೆ.ಎಸ್.ಮೃತ್ಯುಂಜಯ<br>ಕರ್ನಾಟಕ ಮಹರ್ಷಿ ವಾಲ್ಮೀಕಿ<br>ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, | ನಿರ್ದೇಶಕರು |
| 7. | ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು,<br>ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಮತ್ತು<br>ಅಭಿವೃದ್ಧಿ ನಿಗಮ, ನವದೆಹಲಿ, | ನಿರ್ದೇಶಕರು |
| 8. | ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಪ್ರತಿನಿಧಿ ಭಾರತ ಸರ್ಕಾರ | ನಿರ್ದೇಶಕರು |

**ಲೆಕ್ಕಪರಿಶೋಧಕರು,** : ಮೆ: ಬದರಿ ಮಧುಸೂಧನ್ ಮತ್ತು ಶ್ರೀನಿವಾಸನ್,
ಚಾರ್ಟೆಡ್ ಅಕೌಂಟೆಂಟ್ಸ್,
ನಂ:132,ಕಾಂತಕೂಟ,2ನೇ ಮಹಡಿ,
ಲಾಲ್‌ಬಾಗ್ ರಸ್ತೆ, ಬೆಂಗಳೂರು–52.

**ಬ್ಯಾಂಕುಗಳು** :
1 ಸಿಂಡಿಕೇಟ್ ಬ್ಯಾಂಕ್, ಶಾಂತಿನಗರ ಶಾಖೆ,
2. ಕೆನರಾ ಬ್ಯಾಂಕ್, ಸಂಪಂಗಿರಾಮನಗರ,
3. ಬ್ಯಾಂಕ್ ಆಫ್ ಬರೋಡ, ಸಿದ್ದಯ್ಯ ರಸ್ತೆ ಶಾಖೆ,

**ನೋಂದಾಯಿತ ಕಛೇರಿ** : ನಂ:4, 12 ನೇ ಮುಖ್ಯ ರಸ್ತೆ,
ವಸಂತನಗರ, ಬೆಂಗಳೂರು –560052

# ಸೂಚನಾ ಪತ್ರ

**ಈ ಕೆಳಕಂಡ ವ್ಯವಹಾರಗಳ ವ್ಯವಹರಣೆಗಾಗಿ ಬೆಂಗಳೂರು–560052, ವಸಂತನಗರ ಅಂಬೇಡ್ಕರ್ ಭವನ ದಲ್ಲಿ ದಿನಾಂಕ 6ನೇ ಡಿಸೆಂಬರ್ 2014 ಮಧ್ಯಾಹ್ನ 4–00 ಘಂಟೆಗೆ ನಿಗಮದ 7ನೇ ವರ್ಷಿಕ ಸಾಮಾನ್ಯ ಸಭೆಯು ನಡೆಯುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.**

## ಸಾಮಾನ್ಯ ವ್ಯವಹಾರ :

1. ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ 31ನೇ ಮಾರ್ಚ್ 2013ಕ್ಕೆ ಕೊನೆಗೊಂಡ ಜಮಾ ಖರ್ಚು ತ:ಖ್ತೆ, 31ನೇ ಮಾರ್ಚ್ 2013ಕ್ಕೆ ಕೊನೆಗೊಂಡ ಲಾಭ ನಷ್ಟ ತಖ್ತೆ ಮತ್ತು ನಿರ್ದೇಶಕರ, ಲೆಕ್ಕಪರಿಶೋಧಕರ ವರದಿಗಳು ಹಾಗೂ ಭಾರತದ ಮಹಲೇಖಪಾಲಕರು ಮತ್ತು ಆಡಿಟರ್ ಜನರಲ್‌ರವರ ಅಭಿಪ್ರಾಯಗಳನ್ನು ಅಂಗೀಕರಿಸುವುದು ಮತ್ತು ಪರಿಗಣಿಸುವುದು.
2. ಭಾರತದ ಮಹಾಲೇಖಪಾಲಕರು ಮತ್ತು ಆಡಿಟರ್ ಜನರಲ್ ರವರಿಂದ ನೇಮಿಸಲ್ಪಟ್ಟ ಶಾಸನಬದ್ದ ಲೆಕ್ಕ ಪರಿಶೋಧಕರ ಸಂಭಾವನೆಯನ್ನು ನಿರ್ಧರಿಸುವುದು.

ಸ್ಥಳ: ಬೆಂಗಳೂರು

ಆಡಳಿತ ಮಂಡಳಿಯ ಆದೇಶ ಮೇರೆಗೆ

ಸಹಿ/–

ದಿನಾಂಕ: **12.11.2014**

**ವ್ಯವಸ್ಥಾಪಕ ನಿದೇಶಕರು**

**ಸೂಚನೆ:**

1. ಅಧಿಕೃತ ಸದಸ್ಯರು ತಮ್ಮ ಬದಲಾಗಿ ಸಭೆಗೆ ಹಾಜರಾಗಲು ಮತ್ತು ಮತ ಚಲಾಯಿಸಲು ಪ್ರತಿನಿಧಿ ಅಥವಾ ಪ್ರತಿನಿಧಿಗಳನ್ನು ನೇಮಕ ಮಾಡಿಕೊಳ್ಳಬಹುದು.ಪ್ರತಿನಿಧಿಯು ಕಂಪನಿಯ ಸದಸ್ಯರಾಗಿರಬೇಕೆಂದೇನು ಇಲ್ಲ. ಸದರಿ ಪ್ರತಿನಿಧಿಯು ಸಭೆ ನಡೆಯುವುದಕ್ಕೆ 48 ಗಂಟೆಗಳ ಅವಧಿಗಿಂತ ಮುಂಚಿತವಾಗಿ ಕಂಪನಿಗೆ/ನಿಗಮಕ್ಕೆ ತಾವು ಪಾಲ್ಗೊಳ್ಳುತಿರುವುದನ್ನು ತಿಳಿಸಿದಾಗ ಮಾತ್ರ ಊರ್ಜಿತವಾಗುತ್ತದೆ.
2. ಶಾಸನಬದ್ದ ಲೆಕ್ಕ ಪರಿಶೋಧಕರನ್ನು ನೇಮಿಸುವ ಅಧಿಕಾರವು ಭಾರತದ ಮಹಾಲೇಖಪಾಲಕರು ಮತ್ತು ಆಡಿಟರ್ ಜನರಲ್ ರವರು ಹೊಂದಿರುತ್ತಾರೆ.

# ಸದಸ್ಯರಿಗೆ ನಿರ್ದೇಶಕರ ವರದಿ

**ಆತ್ಮೀಯ ಸದಸ್ಯರುಗಳೇ,**

31ನೇ ಮಾರ್ಚ್ 2013 ಕ್ಕೆ ಅಂತ್ಯಗೊಂಡ ಕಂಪನಿಯ ಹಣಕಾಸು ವರ್ಷದ ಲೆಕ್ಕ ಪತ್ರಗಳ ಜಮಾ ಖರ್ಚು ಪಟ್ಟಿ, ಲಾಭ ಮತ್ತು ನಷ್ಟದ ತ:ಖ್ತೆ ಲೆಕ್ಕ ಪರಿಶೋಧಕರ ವರದಿ ಒಳಗೊಂಡ ಕಂಪನಿಯ 7ನೇ ವಾರ್ಷಿಕ ವರದಿಯನ್ನು ಪ್ರಸ್ತುತ ಪಡಿಸಲು ಹಾಗೂ ಕಂಪನಿಗಳ ಕಾಯ್ದೆ 1956 ರ ಪ್ರಕರಣ 619(4) ರನ್ವಯ ಭಾರತದ ಮಹಾಲೇಕಪಾಲರು ಮತ್ತು ಆಡಿಟರ್ ಜನರಲ್ ರವರ ಟೀಕೆಗಳನ್ನು ತಮ್ಮ ಮುಂದಿಡಲು ನಿರ್ದೇಶಕರು ಹರ್ಷಿಸುತ್ತಾರೆ.

**ಹಣಕಾಸು ಫಲಿತಾಂಶಗಳು**

2012-13 ನೇ ಸಾಲಿನಲ್ಲಾದ ನಿಗಮದ ಹಣಕಾಸಿನ ಸಾಧನೆಯು ತೃಪ್ತಿಕರವಾಗಿರುತ್ತದೆ. ಪ್ರಸಕ್ತ ವರ್ಷದಲ್ಲಿ ಅವಲೋಕಿಸಿದಾಗ ರೂ.1156.79 ಲಕ್ಷಗಳ (ಹಿಂದಿನ ವರ್ಷ ರೂ.914.69 ಲಕ್ಷಗಳು) ಒಟ್ಟು ಆದಾಯವನ್ನು ಗಳಿಸಿರುತ್ತದೆ. ಹಾಗೂ ಒಟ್ಟು ವೆಚ್ಚವು ರೂ.458.16 ಲಕ್ಷಗಳಾಗಿರುತ್ತದೆ. (ಹಿಂದಿನ ವರ್ಷ ರೂ.384.46 ಲಕ್ಷಗಳು) ನಿಗಮವು ಹಿಂದಿನ ವರ್ಷದಲ್ಲಿ ರೂ.530.23 ಲಕ್ಷಗಳಷ್ಟು ಲಾಭಗಳಿಸಿತ್ತು. ಇದಕ್ಕೆ ಪೂರಕವಾಗಿ ಪ್ರಸಕ್ತ ವರ್ಷದಲ್ಲಿ ರೂ.698.63 ಲಕ್ಷಗಳ ಲಾಭವನ್ನು ಗಳಿಸಿರುತ್ತದೆ. ವಿವರಗಳು ಈ ಕೆಳಗಿನಂತಿದೆ.

**ರೂ.ಲಕ್ಷಗಳಲ್ಲಿ**

| | 2012-13 | 2011-12 |
|---|---|---|
| ಆದಾಯ | 1156.79 | 914.69 |
| ಕಳೆಯಿರಿ:ವೆಚ್ಚ | 458.16 | 384.46 |
| ಪ್ರಸಕ್ತ ವರ್ಷದ ಆದಾಯ | 698.63 | 530.23 |
| ಹಿಂದಿನ ಅವಧಿಯ ಹೊಂದಾಣಿಕೆ | 1747.15 | 1216.92 |
| ಆದಾಯ ನಂತರದ ಹೊಂದಾಣಿಕೆ | 2445.78 | 1747.15 |
| ಜಮಾ ಖರ್ಚು ಪಟ್ಟಿಗೆ ವರ್ಗಾಯಿಸಲ್ಪಟ್ಟ ಬಾಕಿ | 2445.78 | 1747.15 |

**ವಿವಿಧ ಯೋಜನೆಗಳ ಅಡಿಗಳಲ್ಲಿ ಸಾಧನೆಗಳು :**

ಅವಲೋಕಿಸಿದಾಗ ಆರ್ಥಿಕ ವರ್ಷದಲ್ಲಿ ನಿಮ್ಮ ಕಂಪನಿಯು ವಿವಿಧ ಯೋಜನೆಗಳಡಿ ರೂ.11895.08 ಲಕ್ಷಗಳನ್ನು ವ್ಯಯಿಸುವ ಮೂಲಕ ಪರಿಶಿಷ್ಟ ಪಂಗಡದ 22369 ಫಲಾನುಭವಿಗಳಿಗೆ ಆರ್ಥಿಕ ಸಹಾಯ ಒದಗಿಸಿವೆ. ವಿವರಗಳು ಈ ಕೆಳಗಿನಂತಿದೆ.

**ರೂ.ಲಕ್ಷಗಳಲ್ಲಿ**

| ಕ್ರ ಸಂ | ಯೋಜನೆಗಳು | ಆರ್ಥಿಕ ಸಹಾಯ ಪಡೆದ ಫಲಾನುಭವಿಗಳ ಸಂಖ್ಯೆ | ಆರ್ಥಿಕ ಸಹಾಯಕ್ಕೆ ವ್ಯಯಿಸಲಾದ ಒಟ್ಟು ಮೊತ್ತ |
|---|---|---|---|
| 1. | ಎ) ಸ್ವಯಂ ಉದ್ಯೋಗ ಕಾರ್ಯಕ್ರಮಗಳು | | |
| | 1. ಸ್ವಯಂ ಉದ್ಯೋಗ | 6651 | 1691.34 |
| | 2. ಕೈಗಾರಿಕೆಗಳು ಮತ್ತು ಸೇವಾ ವ್ಯವಹಾರ (ಐಎಸ್‌ಬಿ) | 265 | 154.06 |
| | 3. ನೇರಸಾಲ | 114 | 162.31 |
| | ಬಿ) ಜಮೀನು ಖರೀದಿ | 218 | 487.48 |
| 2 | ಗಂಗಾ ಕಲ್ಯಾಣ ಯೋಜನೆ | | |
| | 1) ವೈಯಕ್ತಿಕ ನೀರಾವರಿ ಕೊಳವೆಬಾವಿ | 3756 | 6263.39 |
| | 2) ಏತ ನೀರಾವರಿ | (3613) | 2000.00 |
| | 3) ಕೊಳವೆಬಾವಿಗಳ ವಿದ್ಯುದ್ದೀಕರಣ | | |
| 3 | ಮೈಕ್ರೋ ಫೈನಾನ್ಸ್ (ಕಿರುಸಾಲ) ಯೋಜನೆ | 11365 | 1136.50 |
| | ಒಟ್ಟು | 22369 | 11895.08 |

ಸೂಚನೆ: ಅವಲೋಕನ ವರ್ಷದಲ್ಲಿ ನಿಮ್ಮ ಕಂಪನಿಯಿಂದ ಅನುಸ್ಠಾನಗೊಂಡ ವಿವಿಧ ಯೋಜನೆಗಳು ಮತ್ತು ಭೌತಿಕ ಮತ್ತು ಆರ್ಥಿಕವಾಗಿ ಪ್ರತಿ ಯೋಜನೆಎಯಡಿಯ ಸಾಧನೆಗಳ ಕುರಿತಾದ ಸಂಕ್ಷಿಪ್ತ ವಿವರ ಕೆಳಗಿನಂತಿದೆ.

### 1. (ಎ) (1) ಸ್ವಯಂ ಉದ್ಯೋಗ ಯೋಜನೆ:

ಸ್ವಯಂ ಉದ್ಯೋಗ ಯೋಜನೆಯನ್ನು ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಲಾಭದಾಯಕ ವ್ಯವಹಾರದ ಚಟುವಟಿಕೆಗಳನ್ನು ಕೈ ಗೊಳ್ಳುವುದಕ್ಕೆ ಹಣಕಾಸು ನೆರವನ್ನು ವಿಸ್ತರಿಸಲು ಮತ್ತು ಆರ್ಥಿಕವಾಗಿ ಸದೃಢರನ್ನಾಗಿಸಲು ಅನುಸ್ಠಾನಗೊಳಿಸಲಾಗಿದೆ.ಇದೊಂದು ಬ್ಯಾಂಕ್ ಸಂಬಂಧಿತ ಯೋಜನೆಯಗಿದ್ದು, ಘಟಕ ವೆಚ್ಚವನ್ನು ರೂ.50000/- ಗಳಿಗೆ ಮಿತಿಗೊಳಿಸಿದ್ದು ಇದರಲ್ಲಿ ಗರಿಷ್ಠ ರೂ.25,000/-ಗಳಿಗೆ ಶೇ.30ರಷ್ಟು ಅನುದಾನವಾಗಿ ನಿಗದಿಗೊಳಿಸಲಾಗಿದೆ ಮತ್ತು ಉಳಿದ ಹಣವು ಬ್ಯಾಂಕುಗಳ ಮೂಲಕ ಸಾಲವಾಗಿ ಬಿಡುಗಡೆಯಾಗಲಿದೆ.

ಕಂಪನಿಯು ಅವಲೋಕನ ವರ್ಷದಲ್ಲಿ ಪರಿಶಿಷ್ಟ ಪಂಗಡಗಳ 6765 ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ರೂ.1691.34 ಲಕ್ಷಗಳನ್ನು ಸಹಾಯಧನವಾಗಿ ಬಿಡುಗಡೆ ಮಾಡಿದೆ.

### 1. (ಎ)(2) ಕೈಗಾರಿಕೆಗಳು ಮತ್ತು ಸೇವವ್ಯವಹಾರ ಯೋಜನೆ(ಐಎಸ್‌ಬಿ)

ಯೋಜನೆಯಡಿ ಘಟಕದ ವೆಚ್ಚವು ರೂ.1,00,000/- ರೂ.10.00 ಲಕ್ಷಗಳಾಗಿರುತ್ತದೆ. ಸದರಿ ಯೋಜನೆಯಡಿ ನಿಗಮವು ಯೋಜನೆಯಡಿ ನಿಗಮವು ಅನ್ವಯಿಸುವಲ್ಲಿ ಸಹಾಯಧನದ ಜೊತೆಗೆ ಅಂಚಿನ ಹಣ ಸಾಲವನ್ನು ಬಿಡುಗಡೆ ಮಾಡಲಿದೆ ಮತ್ತು ಸಾಲದ ಮೊತ್ತವನ್ನು ಬ್ಯಾಂಕುಗಳು ಮಾಡುವವು. ಯೋಜನೆಯಡಿ ಬಿಡುಗಡೆಯಾಗುವ ಅನುದಾನ ಮತ್ತು ಅಂಚಿನ ಹಣದ ಪ್ರಮಾಣವು ಈ ಕೆಳಕಂಡಂತೆ ಇರುತ್ತದೆ.

| | |
|---|---|
| ಘಟಕಗಳ ಯೋಜನಾ ವೆಚ್ಚ ರೂ.1.00ಲಕ್ಷದವರೆಗೆ | 1.ಸಹಾಯಧನ ರೂ.10,000/-ಮತ್ತು<br>2.ಅಂಚಿನ ಹಣ-ಯೋಜನಾ ವೆಚ್ಚದ ಶೇ.20 ರಷ್ಟು |
| ಘಟಕಗಳ ಯೋಜನಾ ವೆಚ್ಚ ರೂ.1.00 ಲಕ್ಷಕ್ಕೂ ಅಧಿಕ | ಅಂಚಿನ ಹಣ-ಗರಿಷ್ಠ ರೂ.1.00 ಲಕ್ಷಕ್ಕೆ ಯೋಜನಾ ವೆಚ್ಚದ ಶೇ.20ರಷ್ಟು |

ಅಂಚಿನ ಹಣ ಸಾಲಕ್ಕೆ ವಾರ್ಷಿಕ ಶೇ.4ರಷ್ಟು ಬಡ್ಡಿ ವಿಧಿಸಲಾಗುತ್ತದೆ. ಪ್ರಸಕ್ತ ವರ್ಷದಲ್ಲಿ ಪರಿಶಿಷ್ಟ ಪಂಗಡಗಳ 265 ಫಲಾನುಭವಿಗಳಿಗೆ ರೂ.154.06 ಲಕ್ಷಗಳ ಹಣಕಾಸಿನ ನೆರವನ್ನು ಬಿಡುಗಡೆ ಮಾಡಲಾಗಿದೆ.

### 1)(ಎ)(3) ನೇರಸಾಲ ಯೋಜನೆ:

ಎನ್‌ಎಸ್‌ಟಿಎಫ್‌ಡಿಸಿ ಯಿಂದ ಅವಧಿಸಾಲ ಪಡೆದು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನಗಳು ಷೇರು ಬಂಡವಾಳ ಹಣವನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ವರಮಾನ ತರುವ ಚಟುವಟಿಕೆಗಳಲ್ಲಿ ನೇರವಾಗಿ ಹಣಕಾಸು ಸಹಾಯವನ್ನು ವಿಸ್ತರಿಸುತ್ತದೆ.

ಯೋಜನೆಯಡಿ ಬಿಡುಗಡೆಗೊಂಡ ಸಹಾಯಧನ ಪ್ರಮಾಣವು ಈ ಕೆಳಗಿನಂತಿದೆ.

| | |
|---|---|
| ಘಟಕಗಳ ಯೋಜನಾ ವೆಚ್ಚ ರೂ.1.00ಲಕ್ಷದವರೆಗೆ | 1.ಸಹಾಯಧನ ರೂ.25,000/-<br>2.ಅಂಚಿನ ಹಣ -ಯೋಜನಾವೆಚ್ಚದ ಶೇ.20 ರಷ್ಟು<br>3.ಉಳಿಕೆ ಭಾಗವು ಅವಧಿ ಸಾಲವಾಗಲಿದೆ. |
| ಘಟಕಗಳ ಯೋಜನಾ ವೆಚ್ಚ ರೂ.1.00 ಲಕ್ಷದಿಂದ ರೂ.10.00 ಲಕ್ಷಗಳವರೆಗೆ | 1.ಪ್ರವರ್ತಕರ ಕೊಡುಗೆ ಯೋಜನಾ ವೆಚ್ಚದ ಶೇ.5 ರಷ್ಟು<br>2.ಅಂಚಿನ ಹಣ-ಯೋಜನಾ ವೆಚ್ಚದ ಶೇ.20 ರಷ್ಟು, ರೂ.1.00 ಲಕ್ಷ.<br>3. ಅವಧಿಸಾಲ- ಯೋಜನಾ ವೆಚ್ಚದ ಶೇ.75% ರಷ್ಟು |

ಅಂಚಿನ ಹಣವು ವಾರ್ಷಿಕ ಶೇ.4 ರ ಮತ್ತು ಅವಧಿಸಾಲವು ವಾರ್ಷಿಕ ಶೇ.6 ರ ದರದಲ್ಲಿ ಬಡ್ಡಿ ಹೊಂದಿರುತ್ತದೆ.

ಅವಲೋಕನ ವರ್ಷದಲ್ಲಿ ಕಂಪನಿಯು ಪರಿಶಿಷ್ಟ ಪಂಗಡದ 114 ಫಲಾನುಭವಿಗಳಿಗೆ ರೂ.162.31 ಲಕ್ಷಗಳಷ್ಟು ಹಣಕಾಸು ಸಹಾಯವನ್ನು ವಿಸ್ತರಿಸಿದೆ.

### 1)(ಬಿ) ಭೂ ಖರೀದಿ ಯೋಜನೆ:

ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದವರಲ್ಲದ ಭೂ ಒಡೆಯರಿಂದ ವ್ಯವಸಾಯ ಯೋಗ್ಯ ಭೂಮಿಯನ್ನು ಖರೀದಿಸಿ ಪರಿಶಿಷ್ಟ ವರ್ಗದ ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ನೀಡಲು ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ 2 ಎಕರೆ ಖುಷ್ಕಿ ಅಥವಾ 1 ಎಕರೆ ತರಿ/ಭಾಗಯ್ತು ಜಮೀನನ್ನು ಖರೀದಿಸಿ ಫಲಾನುಭವಿಗಳಿಗೆ ನೀಡಲಾಗುತ್ತಿದೆ. ರೂ.5.00 ಲಕ್ಷಗಳ ಘಟಕ ವೆಚ್ಚದ ಶೇ.50 ರಷ್ಟು ಸಹಾಯಧನವಾಗಿ, ಹಾಗೂ ಇನ್ನುಳಿದ ಶೇ.50 ಅವಧಿಸಾಲವಾಗಿರುತ್ತದೆ. ಅವಧಿಸಾಲಕ್ಕೆ ಶೇ.6 ರಷ್ಟು ಬಡ್ಡಿ ವಿಧಿಸಲಾಗುತ್ತದೆ.

ಸಂಸ್ಥೆಯು ಈ ಯೋಜನೆಯಡಿಯಲ್ಲಿ 137.03 ಎಕರೆ ಖುಷ್ಕಿ ಜಮೀನು ಮತ್ತು 130.08 ಎಕರೆ ತರಿ ಜಮೀನನ್ನು ಖರೀದಿಸಿದೆ. ಒಟ್ಟು ರೂ.243.74 ಲಕ್ಷಗಳ ವೆಚ್ಚದಲ್ಲಿ 218 ಭೂ ರಹಿತ ಪರಿಶಿಷ್ಟ ಪಂಗಡದ ಮಹಿಳಾ ಕೃಷಿ ಕಾರ್ಮಿಕರಿಗೆ ಒದಗಿಸಿದೆ.

### 2)(1) ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ:

ಪರಿಶಿಷ್ಟ ಪಂಗಡಗಳ ಸಣ್ಣ ಮತ್ತು ಸೂಕ್ಷ್ಮ ರೈತರ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ'ಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಘಟಕದ ವೆಚ್ಚ ರೂ.1.50 ಲಕ್ಷಕ್ಕೆ ನಿಗದಿಪಡಿಸಿದ್ದು, ಇದರಲ್ಲಿ ರೂ.1,00,000-/- ಸಹಾಯಧನವಾಗಿದ್ದು ಉಳಿದ ಭಾಗವನ್ನು ಅವಧಿಸಾಲವನ್ನಾಗಿ ವಾರ್ಷಿಕ ಶೇ.6 ಬಡ್ಡಿದರದಲ್ಲಿ ಮಂಜೂರು ಮಾಡಲಾಗುವುದು.

ಪ್ರಸಕ್ತ ಸಾಲಿನಲ್ಲಿ ಒಟ್ಟು 3756 ಕೊಳವೆಬಾವಿಗಳನ್ನು ಪರಿಶಿಷ್ಟ ಪಂಗಡದವರ ಜಮೀನಿನಲ್ಲಿ ಕೊರೆಯಲಾಗಿದ್ದು ಹಿಂಬಾಕಿಯು ಸೇರಿದಂತೆ ಒಟ್ಟು 5275 ಕೊಳವೆಬಾವಿಗಳನ್ನು ವಿದ್ಯುದ್ದೀಕರಣ ಗೊಳಿಸಲಾಗಿದೆ. ಇದಕ್ಕಾಗಿ ವೆಚ್ಚ ಮಾಡಿರುವ ಒಟ್ಟು ಹಣ ರೂ.8263.39 ಲಕ್ಷಗಳಾ'ಗಿರುತ್ತದೆ.

### 2) (2) ಏತ ನೀರಾವರಿ ಯೋಜನೆ:

ನದಿ ದಂಡೆಯಲ್ಲಿನ ನೀರಿನ ಮೂಲ ಮತ್ತು ಅಣೆಕಟ್ಟುಗಳ ಹಿನ್ನೀರಿನಿ ಮೂಲಗಳಿಂದ ಲಭ್ಯವಿರುವ ನೀರಿನ ಸೌಲಭ್ಯವನ್ನು ಬಳಸಿಕೊಂಡು ಕೊಳವೆ ಮಾರ್ಗಗಳನ್ನು ನಿರ್ಮಿಸಿ ಪಂಪು ಮತ್ತು ಮೋಟಾರ್ ಅಳವಡಿಸಿ,ವಿದ್ಯುತ್ ಸಂಪರ್ಕದೊಂದಿಗೆ ಪರಿಶಿಷ್ಟ ಪಂಗಡಗಳ ಸಣ್ಣ ಮತ್ತು ಸೂಕ್ಷ್ಮ ರೈತರ ಭೂಮಿಗಳಿಗೆ ನೀರು ಒದಗಿಸಲು ಏತ ನೀರಾವರಿ ಯೋಜನೆ ಜಾರಿಗೆ ತಂದಿದೆ. ಪ್ರಸಕ್ತ ವರ್ಷದಲ್ಲಿ ಈ ಯೋಜನೆಗೆ ವೆಚ್ಚವಾಗಿರುವುದಿಲ್ಲ.

### 3.ಮೈಕ್ರೋ ಪೈನಾನ್ಸ್ ಯೋಜನೆ (ರಾಜ್ಯ)

10-20 ಪರಿಶಿಷ್ಟ ಪಂಗಡದ ಸದಸ್ಯರಿರುವ ಸ್ವ-ಸಹಾಯ ಸಂಘಗಳಿಗೆ ಈ ಯೋಜನೆಯಡಿ ಹಣಕಾಸು ನೆರವು ನೀಡಲಾಗುತ್ತಿದೆ. ಈ ಯೋಜನೆಯಡಿ ಪ್ರತಿ ಅರ್ಹ ಸದಸ್ಯರಿಗೆ ನೀಡಲಾಗುವ ಗರಿಷ್ಟ ನೆರವು ರೂ.10000/-ಗಳಾಗಿದ್ದು ಇದರಲ್ಲಿ 5000/-ಸಹಾಯಧನ ಮತ್ತು ರೂ.5000/-ಅಮಚಿನ ಹಣವಾಗಿದೆ, ಅಂಚಿನ ಹಣಕ್ಕೆ ವಾರ್ಷಿಕ ಶೇ. 4ರಂತೆ ಬಡ್ಡಿ ವಿಧಿಸಲಾಗುವುದು ಹಾಗೂ ಅಂಚಿನ ಹಣ ಸಾಲವನ್ನು 36 ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ.

ಅವಲೋಕನ ವರ್ಷದಲ್ಲಿ ಪರಿಶಿಷ್ಟ ಪಂಗಡದ 11365 ಸಂಘದ ಸದಸ್ಯರಿಗೆ ರೂ.1136.50/-ಲಕ್ಷಗಳನ್ನು ಖರ್ಚು ಮಾಡಲಾಗಿದೆ.

### 2012-13 ರಲ್ಲಿದ್ದ ಮಂಡಳಿ ನಿರ್ದೇಶಕರು

| | | |
|---|---|---|
| 1. | ಶ್ರೀ ಕೆ.ವಿ ನಾಗೇಂದ್ರ<br>ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ. | ಅಧ್ಯಕ್ಷರು |
| 2. | ಡಾ. ಇ ವೆಂಕಟಯ್ಯ , ಭಾ.ಆ.ಸೇ<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ. | ನಿರ್ದೇಶಕರು |
| 3. | ಶ್ರೀ. ಜಿ. ಶಿವಸ್ವಾಮಿ, ಭಾ.ಆ.ಸೇ<br>ನಿರ್ದೇಶಕರು,<br>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ. | ನಿರ್ದೇಶಕರು |

| | | |
|---|---|---|
| 4. | ಶ್ರೀ ಎಮ್.ಎ ಹುಸೇನ್<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ,<br>ಕರ್ನಾಟಕ ಸರ್ಕಾರ. | ನಿರ್ದೇಶಕರು |
| 5. | ಶ್ರೀ. ಎಸ್.ಸರ್ಫರಾಜ್ ಖಾನ್<br>ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ<br>ನಿಗಮ, | ನಿರ್ದೇಶಕರು |
| 6. | ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು,<br>ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು<br>ಮತ್ತು ಅಭಿವೃದ್ಧಿ ನಿಗಮ, ನವದೆಹಲಿ. | ನಿರ್ದೇಶಕರು |
| 7. | ಬುಡಕಟ್ಟು ವ್ಯವಹಾರಗಳ ಸಚಿವಾಲಯದ<br>ಪ್ರತಿನಿಧಿ ಭಾರತ ಸರ್ಕಾರ | ನಿರ್ದೇಶಕರು |

ತಮ್ಮ ಕಾರ್ಯಾವಧಿಯಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿದ ಮತ್ತು ಎಲ್ಲಾ ರೀತಿಯಲ್ಲಿ ಸಹಕರಿಸಿದ ಎಲ್ಲಾ ಹಿಂದಿನ ನಿರ್ದೇಶಕರಿಗೆ ಸದರಿ ನಿರ್ದೇಶಕರು ಕೃತಜ್ಞತೆ ಅರ್ಪಿಸಲು ಹರ್ಷಿಸುತ್ತಾರೆ.

**ನೌಕರರ ವಿವರ ಮತ್ತು ಸಂಭಾವನೆ:**

ಕಪನಿಯು ಇಂದಿನವರೆಗೆ ಯಾವುದೇ ಸಿಬ್ಬಂದಿಯನ್ನು ನೇಮಿಸಿಕೊಂಡಿರುವುದಿಲ್ಲ ಮತ್ತು ಕಂಪನಿಯಲ್ಲಿ ಕಾರ್ಯಾನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಪ್ರತಿ ನಿಯೋಜನೆ ಆಧಾರದಲ್ಲಿ ರಾಜ್ಯ ಸರ್ಕಾರ ಮತ್ತು ಸಾರ್ವಜನಿಕ ವಲಯದಿಂದ ತೆಗೆದುಕೊಳ್ಳಲಾಗಿದೆ. 1956ಕಂಪನಿಗಳ ಕಾಯ್ದೆ ಸೆಕ್ಷನ್ 217(2ಎ) ಜೊತೆ ಓದಲಾದ ಕಂಪನಿಗಳ ಕಾಯ್ದೆ 1975ರ (ಸಿಬ್ಬಂದಿ ವಿವರಗಳು) ಉಪಬಂಧಗಳ ಅಡಿಯಲ್ಲಿ ಬಹಿರಂಗಪಡಿಸಬಹುದಾದ ಸಂಭಾವನೆಯನ್ನು ಯಾವುದೇ ಸಿಬ್ಬಂದಿ ಪಡೆಯುತ್ತಿಲ್ಲ.

**ನಿರ್ದೇಶಕರ ಜವಬ್ದಾರಿಯುತ ಹೇಳಿಕೆ:**

1956 ರ ಕಂಪನಿಗಳ ಕಾಯ್ದೆ ಪ್ರಕರಣ 217(2ಎಎ) ಅಡಿಯಲ್ಲಿ ಅಗತ್ಯಪಡಿಸಿರುವಂತೆ ನಿಮ್ಮ ನಿರ್ದೇಶಕರು ಹೇಳುವುದೇನೆಂದರೆ:

ಎ) ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸುವಲ್ಲಿ ಅನ್ವಯಿಸುವ ಲೆಕ್ಕಪತ್ರಗಳ ಗುಣಮಟ್ಟಗಳನ್ನು ಅನುಸರಿಸಲಾಗಿದ್ದು, ಉಂಟಾದ ಸಾರಭೂತ ಬದಲಾವಣೆಗಳಿಗೆ ಸೂಕ್ತ ಸ್ಪಷ್ಟೀಕರಣಗಳನ್ನು ನೀಡಲಾಗಿದೆ.

ಬಿ)ಹಣಕಾಸು ವರ್ಷದ ಕೊನೆಯಲ್ಲಿ ಹಾಗೂ ಆ ಅವಧಿಗಾಗಿರುವ ಕಂಪನಿಯ ಲಾಭದ ಕುರಿತಾಗಿ, ಕಂಪನಿಯ ಸ್ಥಿತಿಗತಿಗಳ ನೈಜವಾದ ಹಾಗೂ ನ್ಯಾಯಯುತವಾದ ನೋಟವನ್ನು ನೀಡಲು ಅನುವಾಗುವಂತೆ ಲೆಕ್ಕಪತ್ರ ಕಾರ್ಯನಿತಿಗಳನ್ನು ಆಯ್ದುಕೊಳ್ಳಲಾಗಿದೆ ಮತ್ತು ಒಂದೇ ರೀತಿಯಲ್ಲಿ ಅನ್ವಯಿಸಲಾಗಿದೆ ಹಾಗೂ ಅಗತ್ಯ ಬಿದ್ದಾಗ ನಿರ್ಣಯಗಳನ್ನು ಹಾಗೂ ಅಂದಾಜುಗಳನ್ನು ಸಮಂಜಸವಾಗಿ ಹಾಗೂ ವಿಚನಾಯುಕ್ತವಾಗಿ ಮಾಡಲಾಗಿದೆ.

ಸಿ)ಕಂಪನಿಗಳ ಕಾಯ್ದೆಯ ಉಪಬಂಧಗಳ ಅನುಸಾರವಾಗಿ, ಸಾಕಷ್ಟು ಲೆಕ್ಕಪತ್ರಗಳ ದಾಖಲೆಗಳನ್ನು ನಿರ್ವಹಿಸಲು ಸೂಕ್ತ ಹಾಗೂ ಸಾಕಷ್ಟು ಎಚ್ಚರಿಕೆಯನ್ನು ವಹಿಸಲಾಗಿದೆ ಹಾಗೂ ಕಂಪನಿಯ ಸ್ವತ್ತುಗಳನ್ನು ರಕ್ಷಿಸಲು ಹಾಗೂ ಮೋಸ ಮತ್ತು ಇತರೆ ಅಕ್ರಮಗಳನ್ನು ಪತ್ತೆ ಹಚ್ಚಲು ಹಾಗೂ ನಿಯಂತ್ರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಡಿ) ಮುಂದುವರೆಯುತ್ತಿರುವ ಸಂಸ್ಥೆ ಆಧಾರದ ಮೇಲೆ ನಿರ್ದೇಶಕರು ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿಸಲಾಗಿದೆ.

ಸಂಸ್ಥೆಯ ಕಾಯ್ದೆ 1956ರ ಸೆಕ್ಷನ್ 217(1)(ಇ) ಪ್ರಕಾರ ಮಾಹಿತಿ–ಇಂಧನ ತಂತ್ರಜ್ಞಾನ, ಸ್ವೀಕೃತಿ ಮತ್ತು ವಿದೇಶ ವಿನಿಮಯದಿಂದ ವರಮಾನ ಮತ್ತು ಖರ್ಚು:

ಸಂಸ್ಥೆಯ ವ್ಯವಹಾರದ ರೀತಿಗೆ ಅನ್ವಯಿಸುವಂತೆ ಈ ಮೇಲ್ಕಂಡ ಯಾವುದೇ ಲೆಕ್ಕಚಾರ ಅಥವಾ ಸಂಶೋಧನೆ ಮತ್ತು ಅಭಿವೃದ್ದಿಗಳಿಂದ ಯಾವುದೇ ವೆಚ್ಚವಾಗಿಲ್ಲ.

**ಲೆಕ್ಕ ಪರಿಶೋಧಕರು:**

ಭಾರತದ ಮಹಾ ಲೆಕ್ಕ ಪರಿಶೋಧಕರು ಮತ್ತು ನಿಯಂತ್ರಕರಾಗಿ ಮೆ:ಬದರಿ ಮಧುಸೂಧನ್ ಅಂಡ್ ಚಾರ್ಟರ್ಡ್ ಅಕೌಂಟೆಂಟ್ಸ್ ರವರನ್ನು 2012–13ನೇ ಸಾಲಿನ ಸಂಸ್ಥೆಯ ಶಾಸನಾತ್ಮಕ ಲೆಕ್ಕಪರಿಶೋಧಕರನ್ನಾಗಿ ನೇಮಿಸಿದ್ದಾರೆ.

ಭಾರತದ ಮಹಾಲೆಕ್ಕಪರಿಶೋಧಕರ ಮತ್ತು ನಿಯಂತ್ರಕರ ಟೀಕೆಗಳು

31.03.2013ಕ್ಕೆ ಅಂತ್ಯಗೊಂಡ ಸಾಲಿಗೆ ಸಂಸ್ಥೆಯ ಲೆಕ್ಕಪತ್ರಗಳ ವರದಿಯನ್ನು 1956ರ ಸಂಸ್ಥೆಯ ಕಾಯ್ದೆ ಸೆಕ್ಷನ್ 619(4)ರ ಪ್ರಕಾರ ಭಾರತ ಮಹಾಲೆಕ್ಕಪರಿಶೊಧಕರ ಮತ್ತು ನಿಯಂತ್ರಕರ ಟೀಕೆಗಳನ್ನು ಲಗತ್ತಿಸಲಾಗಿದೆ.

**ಕೃತಜ್ಞತೆಗಳು:**

ಕರ್ನಾಟಕ ಸರ್ಕಾರ, ಸಮಾಜಕಲ್ಯಾಣ ಇಲಾಖೆ, ಎನ್. ಎಸ್.ಟಿ.ಎಫ್.ಡಿ.ಸಿ. ವಾಣಿಜ್ಯ ಬ್ಯಾಂಕುಗಳು, ಭಾರತ ಸರ್ಕಾರದ ಮಹಾಲೆಕ್ಕಪರಿಶೋಧಕರು ಮತ್ತು ನಿಯಂತ್ರಕರು, ಕರ್ನಾಟಕ ಲೆಕ್ಕ ಪರಿಶೋದಕರು, ಶಾಸನಾತ್ಮಕ ಲೆಕ್ಕ ಪರಿಶೋಧಕರು, ಸಲಹೆಗಾರರು ಮತ್ತು ಎಲ್ಲಾ ವರ್ಗದ ಸಿಬ್ಬಂದಿ ಎಲ್ಲಾ ಹಂತಗಳಲ್ಲೂ ನೀಡಿದ ಸಹಕಾರಕ್ಕೆ ನಿಮ್ಮ ನಿರ್ದೇಶಕರು ಕೃತಜ್ಞತೆ ಅರ್ಪಿಸುತ್ತಾರೆ.

ಮಂಡಳಿಯ ನಿರ್ದೇಶಕರುಗಳ ಪರವಾಗಿ

**ಸಹಿ/–**

**(ಬಸವರಾಜ್ ಎಸ್ ಪಿ)**

ಅಧ್ಯಕ್ಷರು

## ಕಂಪನಿಗಳ ಕಾಯ್ದೆ 1956 ರ ಕಲಂ 217(3)ರ ಅನ್ವಯ ಸದಸ್ಯರ ನಿರ್ದೇಶಕರ ವರದಿಗೆ ತಿದ್ದುಪಡಿಯು ಟಿಪ್ಪಣಿಗಳ ಖಾತೆಯಡಿ ಒಳಗೊಂಡಿರುವುದಿಲ್ಲ. ಶಾಸನಬದ್ದ ಪರಿಶೋಧಕರ ವರದಿಯ ಉಲ್ಲೇಖ

| ಪಾರ ಸಂಖ್ಯೆ | ಪರಿಶೋಧಕರ ಪಾರ | ಆಡಳಿತ ವರ್ಗದ ಪ್ರತಿಕ್ರಿಯೆಗಳು |
|---|---|---|
| 8(a) | ಟಿಪ್ಪಣಿ ಸಂಖ್ಯೆ 1-11 ಮತ್ತು 12-04 ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ನಿಧಿಗಳನ್ನು ಪ್ರತ್ಯೇಕ ಬ್ಯಾಂಕ್ ಖಾತೆ ಇದ್ದು ಮತ್ತು ನಿಶ್ಚಿತ ಠೇವಣಿಯಲ್ಲಿದ್ದು ಅದಕ್ಕೆ ಸಂಬಂಧಿಸಿದ ಬಡ್ಡಿ ಹಣ ರೂ.94,24,339/- ಗಳನ್ನು ನಿಗಮದ ಆದಾಯ ಎಂದು ಪರಿಗಣಿಸಲಾಗಿದೆ. | ಸರ್ಕಾರದಿಂದ ನಿಗಮದ ಆಡಳಿತಾತ್ಮಕ ವೆಚ್ಚಗಳಿಗಾಗಿ ಯಾವುದೇ ಅನುದಾನವನ್ನು ಬಿಡುಗಡೆ ಮಾಡುತ್ತಿರುವುದಿಲ್ಲ. ಹಾಗಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಹೆಸರಿನಲ್ಲಿರುವ ನಿಧಿಯಿಂದ ಬರುವ ಬಡ್ಡಿಯನ್ನು ನಿಗಮದ ಆದಾಯವೆಂದು ಪರಿಗಣಿಸಲಾಗುತ್ತಿದೆ. |
| (b) | ಟಿಪ್ಪಣಿ ಸಂಖ್ಯೆ 4-03 ಬಾಕಿ ಬರಬೇಕಾಗಿರುವ ಸಾಲಗಳೀಗೆ ಸಂಬಂಧಿಸಿದಂತೆ ಲೆಕ್ಕ ಪುಸ್ತಕಕ್ಕು ಮತ್ತು ಎನ್ಎಸ್‌ಟಿಎಫ್‌ಡಿಸಿ ಯಿಂದ ಬರುವ ಡಿಮ್ಯಾಂಡ್ ನೋಟೀಸ್‌ಗು ರೂ.3,99,997/- ಗಳು ವ್ಯತ್ಯಾಸವಿದ್ದು ಲೆಕ್ಕ ಪುಸ್ತಕದಲ್ಲಿ ಹೆಚ್ಚಾಗಿರುತ್ತದೆ. ಇದು ಮರುಹೊಂದಾಣಿಕೆಯಲ್ಲಿದೆ. | ನಿಗಮದ ದಾಖಲೆಗಳ ಮತ್ತು ಎನ್.ಎಸ್.ಟಿ.ಎಫ್.ಡಿ.ಸಿ. ಯಿಂದ ಸ್ವೀಕರಿಸಿದ ಡಿಮಾಂಡ್ ನೋಟೀಸ್ ನಡುವೆ ಇರುವ, ಸಾಲ ಬಾಕಿ ವ್ಯತ್ಯಾಸ ರೂ.3,99,997/- ಸಮನ್ವಯದಲ್ಲಿದೆ. (ನಿಗಮದ ಲೆಕ್ಕದ ಪ್ರಕಾರ ಬರಬೇಕಾದ ಬಾಕಿ ಹೆಚ್ಚಾಗಿರುತ್ತದೆ) |
| (c) | ಟಿಪ್ಪಣಿ ಸಂಖ್ಯೆ 6-02 ಕೊಳವೆಬಾವಿಗಳನ್ನು ಉಪಯೋಗಿಸಿದ ಬಗ್ಗೆ ಎಸ್‌ಕಾಮ್ಸ್ ನವರ ಬಳಿಯಿರುವ ಠೇವಣಿ ಹಣವು ಕ್ರಿಯಾ ಶಕ್ತಿಯಿಂದ ಕೆಲಸ ಮಾಡಲು ನೋಡಿಕೊಳ್ಳುವ ಸಲುವಾಗಿ ಪೂರ್ಣ ಮಾಹಿತಿಯೊಂದಿಗೆ ಪ್ರಮಾಣ ಪತ್ರ ಪಡೆಯಲು ಒಂದು ಸ್ಥಳದಲ್ಲಿ ವ್ಯವಸ್ಥೆಯನ್ನು ಕಲ್ಪಿಸುವುದರ ಬಗ್ಗೆ ಸಂಬಂಧಿಸಿದೆ. | ಎಸ್ಕಾಮ್‌ಗಳಿಂದ ನಿಂದ ಸ್ವೀಕರಿಸಲಾದ ಕ್ಲೈಮ್ ಗಳ ಆಧಾರದ ಮೇಲೆ, ಬೋರ್ ವೆಲ್ ಗಳ ವಿದ್ಯುತೀಕರಣಕ್ಕಾಗಿ ಎಸ್ಕಾಮ್ ಗೆ ಪಾವತಿ ಮಾಡಿದ ಮೊತ್ತವನ್ನು, ಸರ್ಕಾರದಿಂದ ಸ್ವೀಕರಿಸಲಾದ ಟಿ.ಎಸ್.ಪಿ. ಕ್ರೂಡೀಕೃತ ಅನುದಾನದ ಎದುರಿಗೆ ಹೊಂದಿಸಲಾಗಿದೆ. ಆದಾಗ್ಯೂ ಬೋರ್ವೆಲ್‌ಗಳ ವಿದ್ಯುದ್ದೀಕರಣದ ಸಂಪೂರ್ಣ ಮಾಡುವಿಕೆಯ ಆಧಾರದ ಮೇಲೆ, ಕಾರ್ಪೊರೇಷನ್ ಪ್ರಾಯೋಜಿಸಿದ ಫಲಾನುಭವಿಗಳ ವಿವರಗಳೊಡನೆ ಯು.ಸಿ.ಗಳನ್ನು ಪಡೆಯಲು ಒಂದು ವ್ಯವಸ್ಥೆಯನ್ನು ಅಳವಡಿಸುವ ಪ್ರಯತ್ನಗಳು ನಡೆಯುತ್ತಿವೆ. |
| (d) | ಟಿಪ್ಪಣಿ ಸಂಖ್ಯೆ 6-03 ಷೇರು ಅರ್ಜಿಯಿಂದ ಬಂದ ಹಣ ರೂ.19,76,30,000/- ಚಾಲ್ತಿ ಹೊಣೆಗಾರಿಕೆಗಳ ಅಡಿಯಲ್ಲಿ ವರ್ಗೀಕರಿಸಲಾಗಿದೆ. ಇನ್ನೂ ಈಕ್ವಿಟಿ ಬಂಡವಾಳ ಕೂಡದ ಮೊತ್ತವು 31.03.2013ರಂದು ರೂ.16,17,53,000/- ಮಾತ್ರ. | ಅಧಿಕೃತ ಷೇರ್ ಬಂಡವಾಳ ಮೊತ್ತ ರೂ.20,00,00,000/- ರಲ್ಲಿ, ಷೇರ್ ಅಪ್ಲಿಕೇಷನ್ ಮೊತ್ತವಾದ ರೂ.19,76,30,000/- ವು ಅನ್-ಇಶ್ಯೂಡ್ ಷೇರ್ ಬಂಡವಾಳದ ಭಾಗವಾದ ರೂ.16,17,53,000/- ಗಿಂತ ಹೆಚ್ಚಾಗಿದ್ದು, ದಿನಾಂಕ:27.05.2014ರಲ್ಲಿ ಪ್ರತಿ ಷೇರಿನ ಬೆಲೆ ರೂ.10/- ರಂತೆ ಒಟ್ಟು 16175300 ಷೇರುಗಳ ಮೊತ್ತ ರೂ.16,17,53,000/- ಗಳನ್ನು ನೀಡಲಾಗಿದೆ. |
| (e) | ಟಿಪ್ಪಣಿ ಸಂಖ್ಯೆ 6-04 ಎನ್ಎಸ್‌ಟಿಎಫ್‌ಡಿಸಿ ಸಂಸ್ಥೆಯ ಅವಧಿ ಸಾಲಗಳು ಸರಿಯಾಗಿ ಮರುಪಾವತಿಯಾಗಿಲ್ಲದ ಪ್ರಕರಣಗಳಲ್ಲೂ ಸಾಧಾರಣ ಬಡ್ಡಿ ದರದಲ್ಲಿಯೇ ಹೊಂದಾಣಿಕೆ ಮಾಡಿದೆ ಮತ್ತು ಎನ್ಎಸ್‌ಟಿಎಫ್‌ಡಿಸಿ ಸಾಲ ಮತ್ತು ಬಡ್ಡಿ ಬರಬೇಕಾದ್ದುದನ್ನು ಸಾಮಾನ್ಯ ಬಡ್ಡಿ ದರದಲ್ಲಿ ದೃಡೀಕರಿಸಿದೆ ಮತ್ತು ಸುಸ್ತಿ ಬಡ್ಡಿಗೆ ಬೇಡಿಕೆ ಹಾಕಿರುವುದು ಕಾಣುತ್ತಿಲ್ಲ. | ಅನುದಾನದ ನಿಯಮಾವಳಿಗಳ ಪ್ರಕಾರ, ಕಡೆಯ ದಿನಾಂಕದ ಒಳಗೆ ಕಂತುಗಳನ್ನು ಕಟ್ಟದೇ ಹೋದ ಪಕ್ಷದಲ್ಲಿ, ಎನ್. ಎಸ್.ಟಿ.ಎಫ್.ಡಿ.ಸಿ. ಯಿಂದ ಸ್ವೀಕರಿಸಿದ ಸಾಲದ ಮೇಲೆ, ಸಾಮಾನ್ಯವಾದ ಬಡ್ಡಿ ದರ 3 % ನ ಬದಲಾಗಿ, ಹೆಚ್ಚುವರಿ ಬಡ್ಡಿಯನ್ನು 4 % ಪ್ರಕಾರ ಪಾವತಿ ಮಾಡಬೇಕಾಗುತ್ತದೆ. ಈ ಮರುಪಾವತಿಯಲ್ಲಿ ಅಸಡ್ಡೆ ಇದ್ದರೂ, ನಿಗಮದ ಮಾಮೂಲಾದ 3 % ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತಿದೆ ಹಾಗೂ ಅದನ್ನು ಮುಂದುವರಿಸಿಕೊಂಡು ಹೋಗುತ್ತಿದೆ. ಈ ಸಾಲ ಮತ್ತು ಮಾಮೂಲು ದರದಲ್ಲಿ ವಸೂಲಾಗುತ್ತಿರುವ ಬಡ್ಡಿಯನ್ನು ಎನ್. ಎಸ್.ಟಿ.ಎಫ್.ಡಿ.ಸಿ. ಯು ಧೃಡೀಕರಿಸಿದೆ, ಹಾಗೂ ನಿಗಮವು ಯಾವುದೇ ರೀತಿಯ ಸುಸ್ತಿ ಬಡ್ಡಿಯನ್ನು ವಸೂಲು ಮಾಡುವ ಕ್ಲೇಮ್ ಅಥವಾ ಹೊಣೆಗಾರಿಕೆಯನ್ನು ಎದುರುನೋಡುತ್ತಿಲ್ಲ. |

| | | |
|---|---|---|
| (f) | ಟಿಪ್ಪಣಿ ಸಂಖ್ಯೆ 6–07 ಚಾಲ್ತಿ ಹೊಣೆಗಾರಿಕೆಗಳಡಿಯಲ್ಲಿರುವ ಕೊಡಬೇಕಾದ ಮೊತ್ತ ರೂ.31,59,326/– ನ್ನು 31.03.2013 ರಂದಿದೆ ಎಂದು ಪ್ರತ್ಯೇಕವಾಗಿ ತೋರಿಸಿದೆ ಇದು ಕೆಲವು ಯೋಜನೆಗಳ ಜಿಲ್ಲಾ ಬ್ಯಾಂಕ್ ಲೆಕ್ಕಕ್ಕೆ ಸೇರಿದ್ದು. ಪ್ರಧಾನ ಕಛೇರಿಯ ಪುಸ್ತಕಗಳಲ್ಲಿ ಉಪ ಬ್ಯಾಂಕ್ ಖಾತೆಗಳಲ್ಲಿ ಅವುಗಳು ಸಹಾಯಧನ, ಅಂಚಿನ ಹಣ, ಅವಧಿ ಸಾಲ ಮತ್ತು ಪ್ರವರ್ತಕರ ವಂತಿಕೆ ಸೇರಿದವುಗಳಾಗಿದ್ದು ಅವುಗಳ ಲೆಕ್ಕಗಳು ಮರುಹೊಂದಾಣಿಕೆಯಾಗಿ ಅಗತ್ಯವಾದ ಲೆಕ್ಕೀಕರಣದ ಕೆಲಸ ಬಾಕಿ ಇರುತ್ತದೆ. | ಸಹಾಯ ಧನ, ಅಂಚಿನ ಹಣ, ಅವಧಿ ಸಾಲ ಮತ್ತು ಪ್ರವರ್ತಕರ ಕೊಡುಗೆ ಮುಂತಾದುವುಗಳನ್ನು ಒಳಗೊಂಡ ಕೆಲವು ಯೋಜನೆ ಖಾತೆಗಳ ಸಂಬಂಧದಲ್ಲಿ, ಜಿಲ್ಲೆಗಳಲ್ಲಿ ಒಂದೇ ಒಂದು ಖಾತೆಯನ್ನು ನಿರ್ವಹಿಸಿದ್ದರೂ ಮತ್ತು ಮುಖ್ಯ ಕಛೇರಿಯಿಂದ ಆಯಾ ಯೋಜನೆಗಳಡಿಯಲ್ಲಿ ಮೊತ್ತವನ್ನು ವರ್ಗಾಯಿಸಿದ್ದರೂ ಕೂಡಾ, ಕೆಲವು ಜಿಲ್ಲೆಗಳ ಬ್ಯಾಂಕ್ ಖಾತೆಯಲ್ಲಿ 31.3.2013 ರಂದು ರೂ.31,59,326/– ದ ಕ್ರೆಡಿಟ್ ಬ್ಯಾಲೆನ್ಸ್ (ರೂ.4,58,410/–) ಅನ್ನು, ತೀರ್ಮಾನವಾಗದ ಸಮನ್ವಯ ಹಾಗೂ ಕೆಲವು ಅವಶ್ಯಕ ಲೆಕ್ಕ ಪತ್ರ ಹೊಂದಾಣಿಕೆಗಳನ್ನು ಮಾಡಿದ ಮೇಲೆ, ಬೇರೆಯಾಗಿ ಕ್ರೆಡಿಟ್ ಬಾಧ್ಯತೆಯನ್ನಾಗಿ ತೋರಿಸಲಾಗಿದೆ. ಆದಾಗ್ಯೂ, ಇದು ಆದಾಯದ ಮೇಲೆ ಯಾವುದೇ ಪರಿಣಾಮವನ್ನು ಬೀರುವುದಿಲ್ಲ. |
| (g) | ಟಿಪ್ಪಣಿ ಸಂಖ್ಯೆ 7–02 ಸ್ಥಿರ ಆಸ್ತಿಗಳ ದಾಖಲೆ ಪುಸ್ತಕಕ್ಕೂ ಮತ್ತು ಪುಸ್ತಕಗಳಲ್ಲಿರುವ ಮೊತ್ತಕ್ಕೂ ತಾಳೆ ಮಾಡಿಲ್ಲ, ಸ್ಥಿರ ಆಸ್ತಿಗಳ ದಾಖಲೆ ಪುಸ್ತಕಗಳನ್ನು ಪೂರ್ಣವಾಗಿ ದಾಖಲಿಸಿಲ್ಲ. ಟಿಪ್ಪಣಿ ಸಂಖ್ಯೆ 7–03 ಸ್ಥಿರ ಆಸ್ತಿಗಳ ಭೌತಿಕ ತಪಾಸಣೆ ಕೆಲಸ ಬಾಕಿ ಇದೆ ಮತ್ತು ಭೌತಿ–ಕ ತಪಾಸಣೆ ಮಾಡುವಾಗ ಉಪಯೋಗಕ್ಕೆ ಬಾರದ ಆಸ್ತಿಗಳನ್ನು ಗುರುತಿಸುವ ಕಾರ್ಯವೂ ಮಾಡಬೇಕಾಗಿದೆ ಮತ್ತು ಟಿಪ್ಪಣಿ ಸಂ–ಖ್ಯೆ 7–04 ಕೆಲವು ಸ್ಥಿರಾಸ್ತಿಗಳನ್ನು ಕಛೇರಿ ಸಾಧನಗಳ ಅಡಿಯಲ್ಲಿ ವರ್ಗೀಕರಿಸಿದೆ. ಅವುಗಳನ್ನು ಮರು ವರ್ಗೀಕರಿಸಿ ಮೂಲ ಬೆಲೆ ಮತ್ತು ಸವಕಳಿಯನ್ನು ಸರಿಯಾದ ವರ್ಗದಡಿಯಲ್ಲಿ ತರಬೇಕಾಗಿದೆ. | ಸ್ಥಿರ ಆಸ್ತಿಗಳ ರಿಜಿಸ್ಟರ್ ನವೀಕರಿಸಲ್ಪಡುತ್ತಿದೆ. ಇದು ಹೀಗಿರುವಾಗ, ಸ್ಥಿರ ಆಸ್ತಿಗಳ ಸಮನ್ವಯ ಮೊತ್ತವನ್ನು ಪುಸ್ತಕದ ಬಾಕಿಯೊಡನೆ ಸಮತೋಲಿಸುವುದು ಬಾಕಿಯಿದೆ. |
| (h) | ಟಿಪ್ಪಣಿ ಸಂಖ್ಯೆ 11–02(ಎ) 02.08.2011 ರಂದು ಒಟ್ಟು ಮಾಜಿ ಅಧ್ಯಕ್ಷರು ಪದತ್ಯಾಗ ಮಾಡುವಾಗ ಕೆಲವು ಆಸ್ತಿಗಳನ್ನು ಹಿಂತಿರುಗಿಸದೆ ಅವರಿಗೆ ಕೊಟ್ಟಿದ್ದ ಸರ್ಕಾರಿ ವಾಸದ ಮನೆಯನ್ನು ಖಾಲಿ ಮಾಡಿದರು. ಅವರು ಹಿಂತಿರುಗಿಸಿದ ಆಸ್ತಿಗಳ ನಿವ್ವಳ ಬೆಲೆಗೂ ಅವರು ಆ ಆಸ್ತಿಗಳಿಗೆ ಕೊಟ್ಟ ಬೆಲೆಗೂ ಪಿಡಬ್ಲೂಡಿ ಕಟ್ಟಿದ ಬೆಲೆಗೂ ಇರುವ ವ್ಯತ್ಯಾಸ ರೂ.71,350–/– ಆಗಿದ್ದು ಅದನ್ನು ನಿಗಮದ ಲಾಭ ಮತ್ತು ನಷ್ಟದ ತ:ಖ್ತೆಗೆ ಖರ್ಚು ಹಾಕಿದೆ. | ರೂ. ಸೊನ್ನೆ (ರೂ. 7,33,627) 2.08.2011 ರಂತೆ ಪೀಠೋಪಕರಣ ಮತ್ತು ಇತರ ಫಿಕ್ಸ್ಚರ್ ಗಳ (ಮೂಲ ಮೊತ್ತ ರೂ. 7,00,000) ಕಡಿಮೆ ಮೌಲ್ಯದ ಮೊತ್ತ, ಮತ್ತು ಮಾಜಿ ಅಧ್ಯಕ್ಷರೊಬ್ಬರಿಗೆ ಅವರ ಅಧಿಕೃತ ನಿವಾಸದಲ್ಲಿ ಕೊಡಲಾದ, ಆದರೆ ಅವರು 2.8.2011 ರಲ್ಲಿ ತಮ್ಮ ಪದವಿಯನ್ನು ಬಿಟ್ಟು ಹೋದಾಗ ಹಿಂತಿರುಗಿಸದೆ ಇದ್ದ ಕಛೇರಿ ಉಪಕರಣಗಳು (ಮೂಲ ಮೊತ್ತ ರೂ. 43,320). ಪಿ.ಡಬಲ್ಯೂ.ಡಿ. ಮೌಲ್ಯಮಾಪನದ ಪ್ರಕಾರ ಉಳಿಸಿಕೊಳ್ಳಲಾದ ವಸ್ತುಗಳ ಲೆಕ್ಕದಲ್ಲಿ ಸ್ವೀಕರಿಸಲಾದ ರೂ. 6,98,702 ರಲ್ಲಿ, ವ್ಯಾಟ್ ಗಾಗಿ ನೇಮಿಸಿದ ರೂ. 36,425 ಅನ್ನೂ, ಮತ್ತು ಇನ್ನೂ ಸ್ವೀಕರಿಸಬೇಕಾದ ಮೊತ್ತವೆಂದು ತೋರಿಸಿದ ರೂ. 6,62,277 ಅನ್ನೂ ಕಳೆದ ಮೇಲೆ, ಉಳಿಯುವ, ಆದರೆ ವಸೂಲು ಮಾಡಲಾಗದ ಬಾಕಿ ರೂ. 71,350 ಅನ್ನು ಲಾಭ ನಷ್ಟದ ಹೇಳಿಕೆಯಲ್ಲಿ ಉಳಿಕೆ ಹಣ ಎಂದು ತೋರಿಸಲಾಗಿದೆ. |
| (i) | ಟಿಪ್ಪಣಿ ಸಂಖ್ಯೆಗಳು : 17–06 ಮತ್ತು 17–07 ಜಿಲ್ಲಾ ಕಛೇರಿಗಳಿಂದ ಸಂದಾಯ ಮತ್ತು ಪಾವತಿ (ಆರ್ & ಪಿ) ಪಟ್ಟಿಯ ಆಧಾರದ ಮೇಲೆ ಹೇಗಿದೆಯೋ ಹಾಗೆ ಪ್ರಧಾನ ಕಛೇರಿಯಲ್ಲಿ ಲೆಕ್ಕಿಕರಿಸಿದೆ. ಮತ್ತು ಖರ್ಚಿನ ಲೆಕ್ಕ ಸಾಲ ಅಂಚಿನ ಹಣ ಮತ್ತು ಸಹಾಯಧನ ವಿತರಣೆಗಳು ಮತ್ತು ಫಲಾನುಭವಿಗಳಿಂದ ಪಡೆದುಕೊಳ್ಳುವ/ ವಸೂಲಿ ಮಾಡುವ ಲೆಕ್ಕಗಳನ್ನು ಜಿಲ್ಲಾ ಕಛೇರಿಗಳಿಂದ ಬಂದ ಡಿಒಎಸ್/ಆರ್ & ಪಿ ಪಟ್ಟಿಯ ಆಧಾರದ ಮೇಲೆ ಮಾಡಲಾಗುತ್ತಿತ್ತು. | ಸ್ವತಂತ್ರವಾಗಿ ಲೆಕ್ಕಪತ್ರಗಳನ್ನು ನಿರ್ವಹಿಸುವ ಅಧಿಕಾರವು ಡಿಒ ಗಳಿಗಿರುವುದಿಲ್ಲ. ಅವು ನಗದು ಪುಸ್ತಕ ಮತ್ತು ಮಾಸಿಕ ಸ್ವೀಕೃತಿಗಳು ಹಾಗೂ ಪಾವತಿಗಳು (ಆರ್&ಪಿ) ತಃಖ್ತೆಗಳನ್ನು ನಿರ್ವಹಿಸುತ್ತಿವೆ. ಡಿಒಗಳಿಂದ ಸ್ವೀಕರಿಸಿದವುಗಳನ್ನು ಹೆಚ್ಒ ಪುಸ್ತಕಗಳಲ್ಲಿ ಯಥಾಸ್ಥಿತಿ ಯಲ್ಲಿದ್ದಂತೆ ನಿರ್ವಹಿಸುತ್ತಿವೆ.<br><br>ಸಾಲ, ಅಂಚಿನ ಹಣ, ಅನುದಾನ ಇವುಗಳ ವಿತರಣೆಯನ್ನು ಖರ್ಚಿನ ಬಾಬ್ತಿನಲ್ಲಿ ಪರಿಗಣಿಸ ಲಾಗು ವುದು ಮತ್ತು ಫಲಾನುಭವಿಗಳಿಂದ ಅಸಲು, ಬಡ್ಡಿ, ಇತ್ಯಾದಿ ಸ್ವೀಕೃತಿಗಳನ್ನು ಮತ್ತು/ಅಥವಾ ಇತರೇ ಸ್ವೀಕೃತಿ ಗಳನ್ನು ಮತ್ತು ಫಲಾನುಭವಿಗಳ ವಂತಿಕೆಗಳು ಇತ್ಯಾದಿಗಳನ್ನು ಡಿಒಗಳಿಂದ ನೀಡಿದ ಮಾಹಿತಿ ಅಥವಾ ಡಿಒಗಳಿಂದ ಪಡೆದ ಆರ್ಅಂಡ್ಪಿ ತಃಖ್ತೆಗಳಲ್ಲಿ ಪ್ರತಿ ಫಲಿಸಿದಂತೆ ದಾಖಲಿಸಲಾಗುವುದು. |

## ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ

ಕಂಪನಿಯ (ಲೆಕ್ಕ ಪರಿಶೋಧಕರ ವರದಿ) ಆದೇಶ 2003 ರ ಪ್ಯಾರಾ 4 ಮತ್ತು 5 ರಲ್ಲಿ ನೀಡಿರುವ ನಿಗಧಿತ ವಿಷಯಗಳ ಒಂದು ಹೇಳಿಕೆಯು (ಇನ್ನು ಮುಂದೆ ಆದೇಶ ಎಂದು ಉಲ್ಲೇಖಿಸಲಾಗುತ್ತದೆ) ನಮ್ಮ ವರದಿಯ ಪ್ಯಾರಾ 8, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ಸದಸ್ಯರಿಗೆ ವರ್ಷದ ಹಣಕಾಸಿನ ಹೇಳಿಕೆಗಳು ಮಾರ್ಚ್ 31, 2013 ರಂದು ಕೊನೆಗೊಂಡಿತೆಂದು ಉಲ್ಲೇಖಿಸಲಾಗಿರುತ್ತದೆ.

i. ಎ) ನಿಗಮದ ಸ್ಥಿರ ಆಸ್ತಿಗಳ ಪರಿಮಾಣಗಳ ಪೂರ್ಣ ವಿವರ ಹಾಗೂ ಇರುವ ಸ್ಥಳವು ಸೇರಿದಂತೆ ಸಮರ್ಪಕ ದಾಖಲೆಯನ್ನು ಇಟ್ಟಿದೆಯಾದರೂ, ಪ್ರಸ್ತುತ ವರ್ಷದ ಸೇರ್ಪಡೆಗಳನ್ನು ಸ್ಥಿರ ಆಸ್ತಿಗಳ ಪುಸ್ತಕದಲ್ಲಿ ಬರೆಯುವ ಅಗತ್ಯವಿದೆ.

ಬಿ) ನಮಗೆ ದೊರೆತಿರುವ ಮಾಹಿತಿ ಮತ್ತು ವಿವರಗಳಿಗನುಸಾರವಾಗಿ ವ್ಯವಸ್ಥಾಪನೆಯ ಸ್ಥಿರ ಆಸ್ತಿಗಳ ಭೌತಿಕ ತಪಾಸಣೆಯನ್ನು ಪ್ರಸ್ತುತ ವರ್ಷದಲ್ಲಿ ಮಾಡಿಲ್ಲ. ಇದರಿಂದಾಗಿ ಪುಸ್ತಕಕ್ಕೆ ಮತ್ತು ಭೌತಿಕ ತಪಾಸಣೆ ಕಡತಗಳ ನಡುವೆ ಲೋಪದೋಷಗಳೇನಾದರೂ ಇರುವುದನ್ನು ನಿರ್ಧರಿಸಿ ಲೆಕ್ಕ ಪುಸ್ತಕಕ್ಕೆ ತಂದಿಲ್ಲ.

ಸಿ) ಪ್ರಸ್ತುತ ವರ್ಷದಲ್ಲಿ ಗಣನೀಯ ಪ್ರಮಾಣದ ಸ್ಥಿರ ಆಸ್ತಿಗಳನ್ನು ಮಾರಾಟ ಮಾಡಿಲ್ಲ. ಹಾಗಾಗಿ ನಿಗಮದ ಕೆಲಸ ಮುಂದುವರೆಸುವಲ್ಲಿ ತೊಡಕುಗಳಾಗುವುದಿಲ್ಲ.

ii. ನಿಗಮವು ತನ್ನ ಚಟುವಟಿಕೆಗಳನ್ನು ಪರಿಶಿಷ್ಟ ಪಂಗಡಗಳ ಫಲಾನುಭವಿಗಳ ಕಲ್ಯಾಣಕ್ಕಾಗಿ ಸಹಾಯ ಧನ, ಅಂಚಿನ ಹಣ ಮತ್ತು ಸಾಲ ವಿತರಣೆ ಒಳಗೊಂಡಂತೆ ಸರ್ಕಾರದ ಪ್ರಾಯೋಜಿತ ಯೋಜನೆಗಳ ಅನುಷ್ಠಾನ ಮಾಡುವಲ್ಲಿ ತೊಡಗಿಸಿಕೊಂಡಿದೆ. ದಾಸ್ತಾನು ಮತ್ತು ಸರಕು ಮಾರಾಟಗಳಲ್ಲಿ ವ್ಯವಹರಿಸುವುದಿಲ್ಲ. ಆದ್ದರಿಂದ ಆದೇಶ (೨)(ಎ) ಯಿಂದ (ಸಿ) ವರೆಗೆ ಅನ್ವಯಿಸುವುದಿಲ್ಲ.

iii. ಕಂಪನಿಗಳ ಕಾಯ್ದೆ ಪ್ರಕರಣ 301 ಇಡಬೇಕಾದ ದಾಖಲೆ ಪುಸ್ತಕದಲ್ಲಿ ನಿಗಮವು ಯಾವುದೇ ವ್ಯಕ್ತಿಗಳಿಗೆ ಭದ್ರತಾ ಸಹಿತ ಅಥವಾ ಭದ್ರತಾ ರಹಿತ ಸಾಲಗಳನ್ನು ಕೊಡುವುದಾಗಲೀ ಪಡೆದುಕೊಳ್ಳುವುದಾಗಲೀ ಮಾಡಿಲ್ಲ. ಆದ್ದರಿಂದ ಆದೇಶದ ಉಪ ಷರತ್ತು (೩) (ಬಿ) ಯಿಂದ (ಜಿ) ವರೆಗೆ ಅನ್ವಯಿಸುವುದಿಲ್ಲ.

iv. ನಿಗಮವು ತನ್ನ ಚಟುವಟಿಕೆಗಳನ್ನು ಪರಿಶಿಷ್ಟ ಪಂಗಡಗಳ ಫಲಾನುಭವಿಗಳ ಕಲ್ಯಾಣಕ್ಕಾಗಿ ಸಹಾಯ ಧನ, ಅಂಚಿನ ಹಣ ಕೊಡುವುದು ಮತ್ತು ಸಾಲ ವಿತರಣೆಗೆ ಒಳಗೊಂಡಂತೆ ಸರ್ಕಾರದ ಪ್ರಾಯೋಜಿತ ಯೋಜನೆಗಳ ಅನುಷ್ಠಾನ ಮಾಡುವಲ್ಲಿ ತೊಡಗಿಸಿಕೊಂಡಿದೆ. ಯಾವುದೇ ದಾಸ್ತಾನು ಮತ್ತು ಸರಕುಗಳ ಮಾರಾಟಗಳಲ್ಲಿ ವ್ಯವಹರಿಸುವುದಿಲ್ಲ. ಆಂತರಿಕ ನಿಯಂತ್ರಣ ವ್ಯವಸ್ಥೆಯು ಸ್ಥಿರ ಆಸ್ತಿಗಳ ಖರೀದಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಸರಿಯಾಗಿದೆ. ನಮಗೆ ಒದಗಿಸಿದ ಕಡತಗಳನ್ನು ಪರೀಕ್ಷಿಸಲಾಗಿ ಹಾಗೂ ನಮಗೆ ದೊರೆತ ಮಾಹಿತಿ ಮತ್ತು ವಿವರಣೆಗಳನ್ನು ಗಮನಿಸಲಾಗಿ ನಮ್ಮ ಅಭಿಪ್ರಾಯದಲ್ಲಿ ಪ್ರಧಾನ ಕಛೇರಿ ಮತ್ತು ಜಿಲ್ಲಾ ಕಛೇರಿಗಳ ನಡುವೆ ನಡೆಯುವ ಹಣದ ವರ್ಗಾವಣೆ, ಜಿಲ್ಲಾ ಕಛೇರಿಗಳಲ್ಲಿ ಯೋಜನೆಗೆ ಸಂಬಂಧಿಸಿದಂತೆ ಹಣದ ವಿತರಣೆ ಮತ್ತು ವಸೂಲಾತಿ ಅದರ ಬಗ್ಗೆ ಲೆಕ್ಕ ಪತ್ರಗಳನ್ನು ಇಟ್ಟಿರುವುದು, ಯೋಜನೆಗಳಿಗೆ ಸಂಬಂಧಿಸಿದ ವಿತರಣೆಗಳಿಗೆ ಕೊಟ್ಟ ಹಣಕ್ಕೆ ಪ್ರಮುಖ ಕಾಗದ ಪತ್ರಗಳು ಮತ್ತು ನಿರ್ವಹಣೆ ಮಾಡಿರುವ ಕೆಲಸಗಳಿಗೆ ಬಿಲ್ ಪಾವತಿ ಮಾಡುವ ಮೊದಲು ಅಳತೆ ಪುಸ್ತಕಗಳಲ್ಲಿ (ಎಂಬಿ) ಮಾಡಿರುವ ಕೆಲಸದ ಬಗೆಗಿನ ಅಳತೆಗಳನ್ನು ಬರೆಯದೇ ಇರುವುದು, ಪ್ರತಿಯೊಂದು ಕೊಳವೆಬಾವಿಗೂ, ತೆರೆದ ಬಾವಿಗಳಿಗೂ ಮತ್ತು ಏತ ನೀರಾವರಿ ಯೋಜನೆಯಡಿ ಮಾಡಿರುವ ಕೆಲಸಗಳಿಗೆ ಬಿಲ್‌ಗಳನ್ನು ತಯಾರಿಸುವುದು ಮತ್ತು ಹಣ ಕೊಡುವುದು ಮತ್ತು ಗಂಗಾ ಕಲ್ಯಾಣ ಯೋಜನೆಯಡಿ ಕೊಟ್ಟ ಸಾಲದ ಅಂಶವನ್ನು ಪ್ರತ್ಯೇಕಿಸಿಲ್ಲದಿರುವುದು, ಫಲಾನುಭವಿಗಳಿಗೆ ಕೊಟ್ಟ ಸಾಲಕ್ಕೆ ಸಂಬಂಧಿಸಿದ ದಾಖಲೆಗಳನ್ನು ಇಂದಿಕೃತಗೊಳಿಸಿರುವುದಿಲ್ಲ / ಪಡೆದುಕೊಂಡಿಲ್ಲ ಮತ್ತು ಎಲ್ಲಾ ತರಹದಲ್ಲಿ ಪೂರ್ಣಗೊಂಡಿಲ್ಲ ಮತ್ತು ಕಾನೂನಿನ ರೀತ್ಯಾ ಕ್ರಮ ಜರುಗಿಸುವ ಹಾಗೆ ಮತ್ತು ಸಾಲದ ಭದ್ರತೆಗಾಗಿ ಸರಿಯಾಗಿ ಇಟ್ಟುಕೊಂಡಿಲ್ಲ.

v. ಇಂದಿಕೃತಗೊಳಿಸಿ ದಾಖಲಿಸಿದ ದಾಖಲೆ ಪುಸ್ತಕಗಳು ತಮಗೆ ಲಭ್ಯವಿಲ್ಲದಿರುವುದರಿಂದ ನಮಗೆ ದೊರೆತ ಮಾಹಿತಿ ಮತ್ತು ವಿವರಣೆಗಳಿಗನುಸಾರ ಕಂಪನಿಗಳ ಕಾಯ್ದೆ ಪ್ರಕರಣ 301 ರಂತೆ ಗುತ್ತಿಗೆಗಳ ಅಥವಾ ಏರ್ಪಾಡುಗಳನ್ನು ಇಲ್ಲದಿರುವುದರಿಂದ ದಾಖಲೆ ಪುಸ್ತಕಗಳಲ್ಲಿ ಬರೆಯುವ ಅವಶ್ಯಕತೆ ಇಲ್ಲ ಹಾಗಾಗಿ ಆದೇಶದ ಉಪ ಷರತ್ತು (ಬಿ) ಅನ್ವಯಿಸುವುದಿಲ್ಲ.

vi. ನಮಗೆ ದೊರೆತ ವಿವರಣೆಗಳಿಂದ ನಿಗಮದ ಸಾರ್ವಜನಿಕರಿಂದ ಯಾವುದೇ ಠೇವಣಿ ಅಂಗೀಕರಿಸಿರುವುದಿಲ್ಲ ಹಾಗಾಗಿ ಕಂಪನಿಗಳ ಕಾಯ್ದೆ 1956 ರ ಪ್ರಕರಣ 58ಎ, 58ಎಎ ಅಥವಾ ಯಾವುದೇ ಇತರ ಸಂಬಂಧಿತ ನಿಬಂಧನೆಗಳಿಗನುಸಾರವಾಗಿ, ನಿಗಮವು ಸಾರ್ವಜನಿಕರಿಂದ ಯಾವುದೇ ಠೇವಣಿ ಅಂಗೀಕರಿಸಿಲ್ಲ.

vii. ನಿಗಮದ ಆವರಣದಲ್ಲಿ ಆಂತರಿಕ ತನಿಖಾ ವ್ಯವಸ್ಥೆ ಇರಲಿಲ್ಲ.

viii. ಕೇಂದ್ರ ಸರ್ಕಾರವು ಕಂಪನಿಗಳ ಕಾಯ್ದೆ 1956 ರ ಪ್ರಕರಣ 209(1) (ಡಿ) ಅಡಿಯಲ್ಲಿ ನಿರ್ವಹಣೆಯ ವೆಚ್ಚದ ದಾಖಲೆಗಳನ್ನು ಇಡಬೇಕೆಂದು ಸೂಚಿಸಿಲ್ಲ.

ix. ಎ)ಕರ್ನಾಟಕ ಮೌಲ್ಯ ವರ್ಧಿತ ಕಾಯ್ದೆ 2003 ರ ನಿಭಂದನೆಗಳಡಿಯಲ್ಲಿ ರೂ.3,95,187/– ಮತ್ತು 3,58,595/– ಒಳಗೊಂಡಂತೆ ಪಾವತಿಸಿಲ್ಲ. ಈ ಮೊತ್ತವನ್ನು ಕೆಲಸ ಒಪ್ಪಂದದ ತೆರಿಗೆ ಮತ್ತು ಮೌಲ್ಯ ವರ್ಧಿತ ತೆರಿಗೆ ಅಂಶಗಳ ಮೂಲ ಗುತ್ತಿಗೆದಾರರಿಂದ ವಸೂಲಿ ಮಾಡಲಾಗಿದೆ. ರೂ.36,592/–ಗಳನ್ನು ಮಾಜಿ ಅಧ್ಯಕ್ಷರು ಪದವಿಯಿಂದ ಬಿಟ್ಟು ಹೊರಗೆ ಹೋಗುವಾಗ ಉಳಿಸಿಕೊಂಡಿದ್ದು ಕೆಲವು ಆಸ್ತಿಗಳಿಗೆ ಸಂದಾಯ ಮಾಡಬೇಕಾದ ದಿನದಿಂದ ಆರು ತಿಂಗಳಿಗೆ ಮೀರಿದ ಬಾಕಿಗಳಾಗಿ ವಸೂಲಿ ಮಾಡಿರುವುದನ್ನು ಹೊರತುಪಡಿಸಿ ನಿಗಮವು ಸಾಮಾನ್ಯವಾಗಿ ಸೂಕ್ತ ಅಧಿಕಾರಕ್ಕೆ ತಕರಾರಿಲ್ಲದೆ ಶಾಸನ ಬದ್ಧ ಬಾಕಿಯನ್ನು ಕ್ರಮವಾಗಿ ಪಾವತಿಸುತ್ತಿದೆ.

ಬಿ) ನಮಗೆ ದೊರೆತಿರುವ ಮಾಹಿತಿ ಮತ್ತು ವಿವರಗಳಿಗನುಸಾರವಾಗಿ ಸೂಕ್ತ ಅಧಿಕಾರಕ್ಕೆ ಯಾವುದೇ ತಕರಾರಿನಿಂದಾಗಿ ಯಾವುದೇ ಶಾಸನಬದ್ಧ ಬಾಕಿಯನ್ನು ಕಟ್ಟುವಂತೆ ಉಳಿಸಿಕೊಂಡಿಲ್ಲ.

x. ನಿಗಮಕ್ಕೆ ಸಂಚಿತ ನಷ್ಟಗಳಲ್ಲಿ ಪ್ರಸ್ತುತ ವರ್ಷದಲ್ಲಿ ಮತ್ತು ಈ ವರ್ಷಕ್ಕೆ ಸೇರಿದಂತೆ ಹಿಂದಿನ ವರ್ಷದಲ್ಲಿ ನಗದು ನಷ್ಟ ಮಾಡಿಕೊಂಡಿಲ್ಲ.

xi. ಲೆಕ್ಕ ಪುಸ್ತಕಗಳ ಪರಿಶೀಲನೆಗೆ ಅನುಗುಣವಾಗಿ ಮತ್ತು ನಮಗೆ ದೊರೆತಿರುವ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ನಿಗಮದ ಅಸಲು ಬಾಕಿಯಾದ ರೂ.1787.65 ಲಕ್ಷಗಳು ಹಣಕಾಸಿನ ವರ್ಷದಲ್ಲಿ ಕೊಡಬೇಕಾಗಿದ್ದು ಕೊಡದೆ ಸುಸ್ತಿಯಾಗಿದೆ.

xii. ನಮಗೆ ದೊರೆತಿರುವ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ನಿಗಮವು ಭದ್ರತೆ ಆಧಾರದ ಮೇಲೆ ಷೇರುಗಳು, ಸಾಲ ಪತ್ರಗಳು ಮತ್ತು ಭದ್ರತಾ ಪತ್ರಗಳನ್ನು ಗಿರವಿ ಇಟ್ಟುಕೊಂಡು ಯಾವುದೇ ಸಾಲಗಳನ್ನು ಮತ್ತು ಮುಂಗಡ ಹಣವನ್ನು ನೀಡಿರುವುದಿಲ್ಲ.

xiii. ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ದೊರೆತಿರುವ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ, ನಿಗಮದ ಚಿಟ್ ಫಂಡ್ ಅಥವಾ ನಿಧಿ/ಮ್ಯೂಚುವಲ್ ಬೆನಿಫಿಟ್ ಫಂಡ್/ಸೊಸೈಟಿಯಾಗಿರುವುದಿಲ್ಲ. ಆದ್ದರಿಂದ ಆದೇಶ ಉಪ ಷರತ್ತು (ಥ)(ಎ) ಯಿಂದ (ಡಿ) ವರೆಗಿನ ಷರತ್ತುಗಳು ಅನ್ವಯಿಸುವುದಿಲ್ಲ.

xiv.ನಮಗೆ ದೊರೆತ ಮಾಹಿತಿ ಮತ್ತು ವಿವರಗಳಿಗನುಸಾರವಾಗಿ ನಿಗಮದ ಷೇರುಗಳು, ಭದ್ರತಾ ಠೇವಣಿಗಳು, ಸಾಲ ಪತ್ರಗಳು ಇತರ ಹೂಡಿಕೆಗಳನ್ನು ನಡೆಸುತ್ತಿರುವುದು ಅಥವಾ ಮಾರಾಟ ಮಾಡುವುದರಲ್ಲಿ ತೊಡಗಿಕೊಂಡಿಲ್ಲ.

xv. ನಮಗೆ ದೊರೆತಿರುವ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಇತರರು ಬ್ಯಾಂಕುಗಳಲ್ಲಿ ಮತ್ತು ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳಿಗೆ ನಿಗಮವು ಯಾವುದೇ ಖಾತ್ರಿ ನೀಡಿರುವುದಿಲ್ಲ.

xvi. ನಮಗೆ ದೊರೆತಿರುವ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಹಾಗೂ ನಾವು ಪರೀಕ್ಷಿಸಿದ ದಾಖಲೆಗಳ ಆಧಾರದ ಮೇಲೆ, ನಮ್ಮ ಅಭಿಪ್ರಾಯದಂತೆ ನಿಗಮವು ಎನ್‌ಎಸ್‌ಟಿಎಫ್‌ಡಿಸಿ ಯವರಿಂದ ಅವಧಿ ಸಾಲವನ್ನು ಪಡೆದುಕೊಳ್ಳುವ ಉದ್ದೇಶದಿಂದ ಸಾಮಾನ್ಯವಾಗಿ ಅರ್ಜಿ ಸಲ್ಲಿಸುತ್ತಿರುವುದು / ಅರ್ಜಿ ಸಲ್ಲಿಸುವ ಪ್ರಕ್ರಿಯೆಯುಳ್ಳದ್ದಾಗಿದೆ.

xvii. ನಮಗೆ ದೊರೆತ ಮಾಹಿತಿಯಂತೆ ಮತ್ತು ವಿವರಣೆ ಕೊಟ್ಟಂತೆ ನಿಗಮವು ಅಲ್ಪಾವಧಿ ಆಧಾರದ ಮೇಲೆ ಪಡೆದುಕೊಂಡ ಹಣವನ್ನು ಧೀರ್ಘಾವಧಿ ಹೂಡಿಕೆಗಳಿಗೆ ಉಪಯೋಗಿಸಿಲ್ಲ.

xviii. ನಮಗೆ ದೊರೆತಿರುವ ಮಾಹಿತಿ ಮತ್ತು ವಿವರಣೆಗ'ಳಂತೆ ಕಂಪನಿಗಳ ಕಾಯ್ದೆ 1956 ರ ಪ್ರಕರಣ 301 ರ ಅಡಿಯಲ್ಲಿ ಇಡಬೇಕಾದ ದಾಖಲೆ ಪ್ರಕರಣದಂತೆ ನಿಗಮದ ಆದ್ಯತಾ ಷೇರುಗಳ ಹಂಚಿಕೆಯನ್ನು ಯಾವುದೇ ನಿಗಮಗಳಿಗಾಗಲೀ ಅಥವಾ ಕಂಪನಿಗಳಿಗಾಗಲೀ ಮಾಡಿರುವುದಿಲ್ಲ.

xix. ನಿಗಮದಲ್ಲಿ ಪ್ರಸ್ತುತ ವರ್ಷದಲ್ಲಿ ಬಾಕಿ ಕೊಡಬೇಕಾಗಿರುವ ಯಾವುದೇ ಸಾಲ ಪತ್ರಗಳಿರುವುದಿಲ್ಲ.

xx.ನಮಗೆ ದೊರೆತಿರುವ ಮಾಹಿತಿಯಂತೆ ಮತ್ತು ವಿವರಣೆಗಳು ಕೊಟ್ಟಂತೆ ನಿಗಮವು ಪ್ರಸ್ತುತ ವರ್ಷದಲ್ಲಿ ಸಾರ್ವಜನಿಕರಿಂದ ಯಾವುದೇ ಹಣವನ್ನು ಪಡೆದಿರುವುದಿಲ್ಲ.

xxi. ಹಣಕಾಸಿನ ಹೇಳಿಕೆಗಳ ಬಗ್ಗೆ ನಿಜವಾದ ಮತ್ತು ನ್ಯಾಯವಾದ ವರದಿಯನ್ನು ನೀಡುವ ಉದ್ದೇಶಕ್ಕಾಗಿ ತನಿಖಾ ವಿಧಾನಗಳ ಆಧಾರದ ಮೇಲೆ ಮತ್ತು ವ್ಯವಸ್ಥಾಪನೆಯು ನೀಡಿದ ಮಾಹಿತಿ ಮತ್ತು ವಿವರಣೆಯ ಪ್ರಕಾರ ನಮ್ಮ ಜ್ಞಾನದ ಪರಿಮಿತಿಯಲ್ಲಿ ಮತ್ತು ನಂಬಿಕೆ ಅರ್ಹವಾದಂತೆ, ಜಿಲ್ಲಾ ಕಛೇರಿ, ರಾಯಚೂರಿನಲ್ಲಿ ಆರ್ಥಿಕ ವ್ಯವಹಾರಗಳಲ್ಲಿ ಕೆಲವು ಅಕ್ರಮಗಳು / ಶಂಕಿತ ದುರ್ಬಳಕೆ ಬಗ್ಗೆ ಗೌರವಾನ್ವಿತ ಲೋಕಾಯುಕ್ತರವರು ಹಣಕಾಸಿನ ವ್ಯವಹಾರಗಳ ಬಗ್ಗೆ ಆಗಿರುವ ಲೆಕ್ಕ ಪತ್ರಗಳನ್ನು ಮತ್ತು ಇತರೆ ದಾಖಲೆ ಪುಸ್ತಕಗಳನ್ನು ಅವರ ವಶಕ್ಕೆ ತೆಗೆದುಕೊಂಡು ತನಿಖೆ ಮಾಡುತ್ತಿದ್ದಾರೆ. ತನಿಖೆ ಕೆಲಸ ಪೂರ್ಣವಾಗಿರುವುದನ್ನು ಬಾಕಿ ಇಟ್ಟುಕೊಂಡು, 01.04.2012 ರಲ್ಲಿದ್ದಂತೆ ಜಿಲ್ಲಾ ಕಛೇರಿಯಲ್ಲಿ ಏಳು ಯೋಜನೆಗಳ ಬ್ಯಾಂಕ್ ಲೆಕ್ಕದಲ್ಲಿ ಪ್ರತಿನಿಧಿಸುವ ರೂ.7,00,65,867/– ಮತ್ತು ಪ್ರಧಾನ ಕಛೇರಿಯಿಂದ ವರ್ಗಾವಣೆಯಾದ ಪ್ರಸ್ತುತ ವರ್ಷದ ನಿವ್ವಳ ಮೊತ್ತವು ಕೆಲವು ಹೊಂದಾಣಿಕೆಗಳನ್ನು ಬಾಕಿ ಇಟ್ಟುಕೊಂಡು ವಸೂಲಾತಿ ಖಾತೆಯ 31.03.2013 ರ ಶಿಲ್ಕನ್ನು ಜಿಲ್ಲಾ ವ್ಯವಸ್ಥಾಪಕರು, ರಾಯಚೂರು ಎಂಬುವವರಿಂದ ಬರಬೇಕಾದ ಬಾಕಿ ಹಣ ಎಂದು ತೋರಿಸಲಾಗಿದೆ ಮತ್ತು ಹಣ ದುರುಪಯೋಗವಾಗಿರುವುದು ಕಂಡು ಬಂದಲ್ಲಿ ವಸೂಲಾತಿ ಮುಂತಾದ ಕ್ರಮಗಳು ತನಿಖಾ ವರದಿಯಲ್ಲಿ ಹೊರ ಬರುವ ನಿರ್ಣಯದ ಮೇಲೆ ಆಧರಿಸಿದೆ.

ಬದರಿ, ಮಧುಸೂದನ್ & ಶ್ರೀನಿವಾಸನ್ ಪರವಾಗಿ
**ಚಾರ್ಟರ್ಡ್ ಅಕೌಂಟೆಂಟ್ಸ್**
ಎಫ್‌ಆರ್‌ಎನ್ 005389 ಎಸ್
**ಸಹಿ/–**
**(ಟಿ.ವಿ.ಸುದರ್ಶನ್)**
ಪಾಲುದಾರ ಮೆ.ನಂ.19108

ಬೆಂಗಳೂರು
ದಿನಾಂಕ: 11.09.2014

## 31ನೇ ಮಾರ್ಚ್ 2013 ರಲ್ಲಿದ್ದಂತೆ ಜಮಾ ಖರ್ಚು ಪಟ್ಟಿ

(ರೂ. ಗಳಲ್ಲಿ)

| ವಿವರಗಳು | ಅನುಸೂಚಿ | ಪ್ರಸಕ್ತ ಸಾಲಿನ ವರದಿ | ಹಿಂದಿನ ಸಾಲಿನ ವರದಿ |
|---|---|---|---|
| **1. ಜಮಾ ಮತ್ತು ಖರ್ಚುಗಳು** | | | |
| **ಷೇರುದಾರರ ಬಂಡವಾಳ** | | | |
| (1) ಷೇರು ಬಂಡವಾಳ | 2 | 38,247,000 | 38,247,000 |
| (2) ಮೀಸಲು ಮತ್ತು | 3 | 244,577,925 | 174,715,236 |
| | | **282,824,925** | **212,962,236** |
| **ಚಾಲ್ತಿಯಲ್ಲಿದ ಹೊಣೆಗಾರಿಕೆಗಳು** | | | |
| (ಎ) ದೀರ್ಘಾವಧಿ ಸಾಲಗಳು | 4 | 356,037,090 | 161,913,836 |
| **ಚಾಲ್ತಿ ಹೊಣೆಗಾರಿಗಳು** | | | |
| (ಎ) ವ್ಯವಹಾರದ ಪಾವತಿಗಳು | 5 | 112,081,926 | 92,398,419 |
| (ಬಿ) ಇತರೆ ಚಾಲ್ತಿ ಹೊಣೆಗಾರಿಗಳು | 6 | 1,735,051,762 | 1,515,373,155 |
| | | **1,847,133,688** | **1,607,771,574** |
| **ಒಟ್ಟು** | | **2,485,995,703** | **1,982,647,646** |
| **2. ಆಸ್ತಿಗಳು** | | | |
| **ಚಾಲ್ತಿ ಆಸ್ತಿಗಳು** | | | |
| **(ಎ) ಸ್ಥಿರಾಸ್ತಿಗಳು** | | | |
| ಸ್ಪಷ್ಟವಾದ ಆಸ್ತಿಗಳು | 7 | 9,492,096 | 8,126,063 |
| (ಬಿ) ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು | 8 | 206,287,690 | 178,711,702 |
| | | **215,779,786** | **186,837,765** |
| **ಚಾಲ್ತಿ ಆಸ್ತಿಗಳು** | | | |
| (ಎ) ನಗದು ಮತ್ತು ಬ್ಯಾಂಕ್ ಶಿಲ್ಕುಗಳು | 9 | 2,175,199,923 | 1,763,360,143 |
| (ಬಿ) ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು | 10 | 134,629 | 720,955 |
| (ಸಿ) ಇತರೆ ಚಾಲ್ತಿ ಆಸ್ತಿಗಳು | 11 | 94,881,365 | 31,728,783 |
| | | **2,270,215,917** | **1,795,809,881** |
| **ಒಟ್ಟು** | | **2,485,995,703** | **1,982,647,646** |
| **3. ಅನುಸೂಚಿಗಳು ಜಮಾ ಖರ್ಚು ಪಟ್ಟಿಯ ಸಮಗ್ರ ಭಾಗವಾಗಿರುತ್ತದೆ** | 1 ರಿಂದ 17 | | |

ಮಂಡಳಿಯ ಪರವಾಗಿ

ನಮ್ಮ ವರದಿಯ ದಿನಾಂಕದಂತೆ
**ಬದರಿ, ಮಧುಸೂಧನ್ ಅಂಡ್ ಶ್ರೀನಿವಾಸನ್**
**ಚಾರ್ಟರ್ಡ್ ಅಕೌಂಟೆಂಟ್ಸ್**
ಎಫ್‌ಆರ್ ನಂ:05389ಎಸ್

| | | | |
|---|---|---|---|
| ಸಹಿ/– | ಸಹಿ/– | ಸಹಿ/– | |
| **(ಕೆ.ಎಸ್ ಮೃತ್ಯುಂಜಯ)** | **( ರಾಜೇಶ್ವರಿ ಎಲ್)** | **(ಹೆಚ್.ಆಂಜನೇಯ)** | ಸಹಿ/– |
| **ವ್ಯವಸ್ಥಾಪಕ ನಿರ್ದೇಶಕರು** | **ನಿರ್ದೇಶಕರು** | **ಅಧ್ಯಕ್ಷರು** | (ಟಿ.ವಿ ಸುದರ್ಶನ್) |
| | | | ಪಾಲುದಾರರು |

ಸ್ಥಳ : ಃ ಬೆಂಗಳೂರು
ದಿನಾಂಕ : 11.09.2014

ಸದಸ್ಯತ್ವದ ಸಂಖ್ಯೆ: 019108

ಸಮಯದಲ್ಲಿ ಸೇರಿಸಿ ನೀಡಲಾಗುವುದು. ಉಳಿತಾಯ ಖಾತೆಯ ಮೇಲೆ ನೀಡಲಾಗುವ ಬಡ್ಡಿಗೆ ಲೆಕ್ಕವನ್ನೂ ಇಡಲಾಗುವುದು.

**ಫಲಾನುಭವಿಗಳಿಗೆ ಸಾಲದ ಮೇಲೆ ಬಡ್ಡಿ**

ಸಾಲದ ಮೇಲೆ ಬಡ್ಡಿಯನ್ನು ಆಯ್ದ ಫಲಾನುಭವಿಗಳಿಗೆ ಆದಾಯದ ರೂಪದಲ್ಲಿ ನೀಡಲಾಗುವುದು ಬಡ್ಡಿಯನ್ನು ಸಾಮಾನ್ಯ ಬಡ್ಡಿದರ ಪ್ರಕಾರ ನೀಡಲಾಗುವುದು.

ಗಂಗಾ ಕಲ್ಯಾಣ ಯೋಜನೆಯಡಿ ಸಬ್ಸಿಡಿಯಲ್ಲಿ ಸಾಲವನ್ನು ನೀಡಲಾಗುವುದು ಹಾಗೂ ದಿನಾಂಕದಿಂದ ನಿಗದಿತ ದಿನದವರೆಗೆ ಬೋರ್‌ವೆಲ್ ಹಾಕುವ ಅಥವಾ ಕೆಲಸ ನಿರ್ವಹಿಸುವ ಸಮಯದಿಂದ ಸಬ್ಸಿಡಿಯನ್ನು ಈ ಯೋಜನೆಯ ಫಲವನ್ನು ಪಡೆದುಕೊಳ್ಳುವ ಫಲಾನುಭವಿಗೆ ನೀಡಲಾಗುವುದು.

ನೇರ ಸಾಳ ಸೌಲಭ್ಯದಡಿಯಲ್ಲಿ ಸಾಲದ ಹಣವು ನೇರವಾಗಿ ವಾಹನ, ಸಲಕರಣೆಯನ್ನು ಕೊಳ್ಳಲು ನೇರವಾಗಿ ಬ್ಯಾಂಕಿಗೇ ಪಾವತಿಸಲಾಗುವುದು. ಹಾಗೂ ಇದು ಸಂಸ್ಥೆಯ ಖಾತೆಗೆ ನಿಗದಿತ ದಿನಾಂಕದಂದು ವರ್ಗಾವಣೆಯಾಗುವಂತೆ ನೋಡಿಕೊಳ್ಳಲಾಗುವುದು.

ಈ ಹಿಂದಿನ ಸಾಲಿನಲ್ಲಿ ಸಾಲ ಮಂಜೂರಾಗಿದ್ದರೆ ಬಡ್ಡಿ ದರವನ್ನು ಮುಂದಿನ ಪೂರ್ಣವಾಗಿ ವರ್ಷಕ್ಕೂ ಹಾಕಲಾಗುವುದು.

ಈ ವರ್ಷ ಕೊನೆಯ ತಿಂಗಳಿನಲ್ಲಿ ಸಾಲ ಮಂಜೂರಾಗಿದ್ದರೆ ಕೊನೆಯ ತಿಂಗಳಿಗೆ ಮಾತ್ರ ಬಡ್ಡಿಯನ್ನು ಹಾಕಲಾಗುವುದು.

ನೌಕರರ ಲಾಭಗಳು

1.14 ನೌಕರರು ಸರ್ಕಾರದಿಂದ ನೇಮಕಗೊಂಡಿದ್ದರೆ ಅವರಿಗೆ ಪ್ರಾವಿಡೆಂಟ್ ಫಂಡ್, ನಿವೃತ್ತಿ ವೇತನ, ಗ್ರ್ಯಾಚುಟಿ ಮತ್ತು ರಜೆಯ ಸಾಲವನ್ನು ಕರ್ನಾಟಕ ಸಿವಿಲ್ ಸೇವೆಗಳ ಕಾಯ್ದೆ 1958ರ ಪ್ರಕಾರ ನೀಡಲಾಗುವುದು ಅಥವಾ ಆ ಇಲಾಖೆಯಲ್ಲಿ ನಿಗದಿಯಾದ ನಿಯಮಗಳ ಪ್ರಕಾರ ನೀಡಲಾಗುವುದು.

1.15 ಗುತ್ತಿಗೆಯಾಧಾರದ ನೌಕರರು ಯಾವುದೇ ಲಾಭಗಳನ್ನು ಪಡಯಲು ಅರ್ಹರಾಗಿರುವುದಿಲ್ಲ.

1.16 ಇತರೆ ಯಾವುದೇ ಲಾಭಗಳಿದ್ದಲ್ಲಿ ಅದನ್ನು ವೇತನದ ರೂಪದಲ್ಲಿ ನೀಡಲಾಗುವುದು.

## 31ನೇ ಮಾರ್ಚ್ 2013 ರಲ್ಲಿದ್ದಂತೆ ಜಮಾ ಖರ್ಚು ಪಟ್ಟಿಯ ಭಾಗವಾದ ಅನುಸೂಚಿಗಳು

(ರೂ.ಗಳಲ್ಲಿ)

**ಟಿಪ್ಪಣಿ ಸಂಖ್ಯೆ: 2.01: ಷೇರು ಬಂಡವಾಳ**

ಅಧಿಕೃತ ನೀಡಿದ್ದು, ವಂತಿಕೆ ಸಲ್ಲಿಸಿದ್ದು ಮತ್ತು ಪಾವತಿಸಿದ್ದು ಮುಖ ಬೆಲೆ ತಲಾ ರೂ.100/– ಗಳಂತೆ ಈ ಕೆಳಕಂಡಂತಿರುತ್ತದೆ.

| ಅಧಿಕೃತ | 31.03.2013 ರಲ್ಲಿದ್ದಂತೆ | 31.03.2012 ರಲ್ಲಿದ್ದಂತೆ |
|---|---|---|
| ತಲಾ ರೂ.100/– 2000000(500000) ಸಮಾನಾಂಶ ಷೇರುಗಳು | 200,000,000 | 50,000,000 |
| ನೀಡಿದ್ದು, ವಂತಿಕೆ ಸಲ್ಲಿಸಿದ್ದು ಮತ್ತು ಪಾವತಿಸಿದ್ದು ಪಾವತಿಸಿ ರೂ.100/–(100) | | |
| 382470(382470) ಸಮಾನಾಂಶ ಷೇರುಗಳು | 38,247,000 | 38,247,000 |

**ಎ) ಮರು ಹೊಂದಾಣಿಕೆ ಷೇರುಗಳ ಸಂಖ್ಯೆ**

| | 31.03.2013 ರಲ್ಲಿದ್ದಂತೆ | | 31.03.2012 ರಲ್ಲಿದ್ದಂತೆ | |
|---|---|---|---|---|
| | ಷೇರುಗಳ ಸಂಖ್ಯೆ | ಮೊಬಲಗು | ಷೇರುಗಳ ಸಂಖ್ಯೆ | ಮೊಬಲಗು |
| **ಸಮಾನಾಂಶ ಷೇರುಗಳು** | | | | |
| ವರ್ಷದ ಪ್ರಾರಂಭಿಕ ಶಿಲ್ಕು | 382,470 | 38,247,000 | 382,470 | 38,247,000 |
| ಚಾಲ್ತಿ ವರ್ಷದಲ್ಲಿ ಆದ ಬದಲಾವಣೆಗಳು | – | – | – | – |
| ವರ್ಷಾಂತ್ಯಕ್ಕೆ ಶಿಲ್ಕು | 382,470 | 8,247,000 | 382,470 | 38,247,000 |

**ಬಿ) ಷೇರುಗಳಿಗೆ ಲಗತ್ತಾದ ಪ್ರಾಧಿಕಾರ, ಪ್ರಾಮುಖ್ಯತೆ ಮತ್ತು ಷರತ್ತುಗಳು**

ನಿಗಮದ ಒಂದು ವಿಧವಾದ ಷೇರುಗಳ ಸಮಾನಾಂಶ ಮುಖ ಬೆಲೆಯು ತಲಾ ರೂ.100 ಆಗಿರುತ್ತದೆ. ಪ್ರತಿಯೊಬ್ಬ ಷೇರುದಾರರು ತಾವು ಹೊಂದಿರುವ ಒಂದೊಂದು ಷೇರಿಗೆ ಒಂದು ಮತ ಚಲಾಯಿಸುವ ಹಕ್ಕನ್ನು ಹೊಂದಿರುತ್ತಾರೆ

ಒಂದು ವೇಳೆ ನಿಗಮವು ತನ್ನ ವ್ಯವಹಾರವನ್ನು ಸ್ಥಗಿತಗೊಳಿಸಿದಲ್ಲಿ ಪ್ರಮುಖವಾಗಿ ಪಾವತಿಸಬೇಕಾದದ್ದನ್ನು ಪಾವತಿ ಮಾಡಿದ ನಂತರ ಉಳಿದ ಸ್ಥಿರಾಸ್ತಿಗಳ/ಚರಾಸ್ತಿಗಳನ್ನು ಷೇರು ಬಂಡವಾಳದಾರರಿಗೆ ತಾವು ಹೊಂದಿರುವ ಷೇರುಗಳ ಸಂಖ್ಯೆಗೆ ಅನುಗುಣವಾಗು ಪಡೆಯಲು ಅರ್ಹರಾಗಿರುತ್ತಾರೆ.

**ಸಿ) ನಿಗಮದಲ್ಲಿ ಷೇರು ಬಂಡವಾಳದಾರರು ಶೇಕಡಾ 5ಕ್ಕಿಂತಲೂ ಹೆಚ್ಚಯ ಷೇರುಗಳನ್ನು ಹೊಂದಿರುವ ಷೇರುಗಳ ವಿವರಗಳು :**

| | 31.03.2013 ರಲ್ಲಿದ್ದಂತೆ | | 31.03.2012 ರಲ್ಲಿದ್ದಂತೆ | |
|---|---|---|---|---|
| **ಸಮಾನಾಂಶ ಷೇರುಗಳು** | ಷೇರುಗಳ ಸಂಖ್ಯೆ | ಶೇಕಡವಾರು ಪಾವತಿಸಿದ ಷೇರು ಬಂಡವಾಳ | ಷೇರುಗಳ ಸಂಖ್ಯೆ | ಶೇಕಡವಾರು ಪಾವತಿಸಿದ ಷೇರು ಬಂಡವಾಳ |
| ವರ್ಷದ ಪ್ರಾರಂಭದಲ್ಲಿ ಶಿಲ್ಕು | 381,470 | 99.74 | 381,470 | 99.74 |

**ಡಿ) ಕೊನೆಯ ಐದು ವರ್ಷಗಳಲ್ಲಿ ನೀಡಿದ ಷೇರುಗಳ ಮಾಹಿತಿ**

ನಿಗಮವು ನಗದಾಗಿ ಷೇರಿನ ಹಣವನ್ನು ಪಡೆಯದೇ ಯಾವುದೇ ಷೇರುಗಳನ್ನು ನೀಡಿರುವುದಿಲ್ಲ.

ನಿಗಮವು ಯಾವುದೇ ಇನಾಮು ಷೇರುಗಳನ್ನು ನೀಡಿರುವುದಿಲ್ಲ.

ನಿಗಮವು ಯಾವುದೇ ಮಾರಾಟ ಮಾಡಿದ ಷೇರುಗಳನ್ನು ಮರಳಿ ಪಡೆಯುತ್ತೇವೆಂದು ಯಾವುದೇ ಅಂಗೀಕರವನ್ನು ನೀಡಿರುವುದಿಲ್ಲ

2.02 ಕಾರ್ಪೊರೇಷನ್ನಿನ ಅಧಿಕಾರಯುತ ಷೇರ್ ಕ್ಯಾಪಿಟಲ್ ಅನ್ನು ಪ್ರತಿ ಷೇರಿಗೆ ರೂ. 100 ರಂತೆ 5,00,000 ಈಕ್ವಿಟಿ ಷೇರ್ ಗಳನ್ನೊಳಗೊಂಡ ರೂ. 500 ಲಕ್ಷದಿಂದ, ಪ್ರತಿ ಷೇರಿಗೆ ರೂ. 100 ರಂತೆ 20,00,000 ಈಕ್ವಿಟಿ ಷೇರ್ ಗಳನ್ನೊಳಗೊಂಡ ರೂ. 2000 ಲಕ್ಷಗಳಿಗೆ, 22.12.2012 ದಿನಾಂಕದಂದು ನಡೆದ ವಾರ್ಷಿಕ ಜನರಲ್ ಬಾಡಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ, ಹೆಚ್ಚಿಸಲಾಯಿತು. ಇದರಲ್ಲಿ ರೂ. 100 ರಂತೆ 16,17,530 ಈಕ್ವಿಟಿ ಷೇರ್ ಗಳನ್ನುಳ್ಳ ರೂ. 1,617,53 ಲಕ್ಷಗಳು ಇವೆ. ಇದು ಇಡೀ ಷೇರ್ ಅಪ್ಲಿಕೇಷನ್ ಹಣವಾದ ರೂ. 1,976.30 ಲಕ್ಷಕ್ಕೆ ಷೇರ್ ಗಳನ್ನು 31.03.2013 ದಿನಾಂಕದಲ್ಲಿ ಇಶ್ಯೂ ಮಾಡಲು ಸಾಕಾಗುವುದಿಲ್ಲ. (ಭಾರತ ಸರ್ಕಾರದ ರೂ. 918.80 ಲಕ್ಷಗಳು, ಮತ್ತು ಕರ್ನಾಟಕ ಸರ್ಕಾರದ ರೂ. 1057.50 ಲಕ್ಷಗಳು, ಅಲ್ಲದೆ ಮೈಕ್ರೋ ಕ್ರೆಡಿಟ್ ಫೈನಾನ್ಸ್ (ಎಮ್.ಸಿ.ಎಫ್.) ನಿಂದ (ಮಾರ್ಜಿನ್ ಮನಿ) ಸಹಾಯ ಧನವಾಗಿ ಸ್ವೀಕರಿಸಿದ ರೂ. 292.50 ಲಕ್ಷಗಳು ಸೇರಿದಂತೆ). ರೂ. 1,976.30 ಲಕ್ಷ ಷೇರ್ ಅಪ್ಲಿಕೇಷನ್ ಮೊತ್ತಕ್ಕಾಗಿ, ಷೇರ್‌ಗಳನ್ನು ಇಶ್ಯೂ ಮಾಡಲು ಅವಶ್ಯಕವಾದ ಅಧಿಕೃತ ಬಂಡವಾಳದಲ್ಲಿ ಹೆಚ್ಚುವರಿ ತೀರ್ಮಾನವಾಗದೆ ಇರುವುದರಿಂದ, ಈ ಇಡೀ ಮೊತ್ತವನ್ನು ಪ್ರಸ್ತುತ ಬಾಧ್ಯತೆಯನ್ನಾಗಿ ತೋರಿಸಲಾಗಿದೆ.

| | 31.03.2013 ರಲ್ಲಿದ್ದಂತೆ | 31.03.2012 ರಲ್ಲಿದ್ದಂತೆ |
|---|---|---|
| **ಟಿಪ್ಪಣಿ ಸಂಖ್ಯೆ. 3 ಮೀಸಲುಗಳು ಮತ್ತು ಹೆಚ್ಚಳಗಳು** | | |
| ಲಾಭ ನಷ್ಟ ತಖ್ತೆ:ಯಲ್ಲಿ ಹೆಚ್ಚಳಗಳು | | |
| (1) ಪ್ರಾರಂಭಿಕ ಶಿಲ್ಕು | 174,715,236 | 121,691,682 |
| (2) ಕೂಡಿರಿ : ಚಾಲ್ತಿ ವರ್ಷದಲ್ಲಿ ಗಳಿಸಿದ ಲಾಭ | 69,862,689 | 53,023,554 |
| ಒಟ್ಟು | **244,577,925** | **174,715,236** |

| | 31.03.2013 ರಲ್ಲಿದ್ದಂತೆ | 31.03.2012 ರಲ್ಲಿದ್ದಂತೆ |
|---|---|---|
| **ಚಾಲ್ತಿ ವರ್ಷದಲ್ಲದ ಜವಾಬ್ದಾರಿಗಳು** | | |
| ಟಿಪ್ಪಣಿ ಸಂಖ್ಯೆ.: 4.01 ದೀರ್ಘಾವಧಿ ಸಾಲಗಳು | | |
| ನ್ಯಾಷನಲ್ ಎಸ್‌ಟಿ ಫೈನಾನ್ಸ್ ಅಂಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ (ಎನ್‌ಎಸ್‌ಟಿಎಫ್‌ಡಿಸಿ) ರವರಿಂದ ಅಭದ್ರ ಸಾಲಗಳು | 356,037,090 | 161,913,836 |
| ಒಟ್ಟು | **356,037,090** | **161,913,836** |

4.02 ಕರ್ನಾಟಕ ಸರ್ಕಾರದಿಂದ ಮೊತ್ತ ರೂ. 78,49,00,000 ಗ್ಯಾರಂಟಿಯ ವ್ಯಾಪ್ತಿಯೊಳಗಿರುವ ಎನ್.ಎಸ್.ಟಿ.ಎಫ್.ಡಿ.ಸಿ. ಯಿಂದ ಸ್ವೀಕರಿಸಿದ, ಆಧಾರವಿಲ್ಲದ ವಾಯಿದೆ ಸಾಲ ರೂ. 53,49,00,000.

4.03 ಕಾರ್ಪೊರೇಷನ್ನಿನ ದಾಖಲೆಗಳ ಮತ್ತು ಎನ್.ಎಸ್.ಟಿ.ಎಫ್.ಡಿ.ಸಿ. ಯಿಂದ ಸ್ವೀಕರಿಸಿದ ಡಿಮಾಂಡ್ ನೋಟೀಸ್ ನಡುವೆ ಇರುವ, ಸಾಲ ಬಾಕಿ ವ್ಯತ್ಯಾಸ ರೂ. 3,99,997 ಸಮನ್ವಯದಲ್ಲಿದೆ. (ಕಾರ್ಪೊರೇಷನ್‌ನ ಭಾಗ ಹೆಚ್ಚಾಗಿರುವುದರಿಂದ ಇದನ್ನು ಬಾಕಿ ಎಂದು ಪರಿಗಣಿಸಲಾಗಿದೆ.)

| | 31.03.2013 ರಲ್ಲಿದ್ದಂತೆ | 31.03.2012 ರಲ್ಲಿದ್ದಂತೆ |
|---|---|---|
| ಚಾಲ್ತಿ ವರ್ಷದ ಜವಾಬ್ದಾರಿಗಳು | | |
| ಟಿಪ್ಪಣಿ ಸಂಖ್ಯೆ.:5 ನಿಗಮದ ವ್ಯವಹಾರಕ್ಕೆ ಸಂಬಂಧಪಟ್ಟಿದ್ದು | 112,081,926 | 92,398,419 |
| ಒಟ್ಟು | **112,081,926** | **92,398,419** |

| | 31.03.2013 ರಲ್ಲಿದ್ದಂತೆ | 31.03.2012 ರಲ್ಲಿದ್ದಂತೆ |
|---|---|---|
| **ಟಿಪ್ಪಣಿ ಸಂಖ್ಯೆ.: 6.01 ಇತರೇ ಚಾಲ್ತಿ ವರ್ಷದ ಜವಾಬ್ದಾರಿಗಳು** | | |
| ಕರ್ನಾಟಕ ಸರ್ಕಾರದಿಂದ ಅನುದಾನ | 1,211,248,684 | 993,722,916 |
| ಹಂಚಿಕೆಗಾಗಿ ಬಾಕಿ ಇರುವ ಷೇರುಗಳ ಅರ್ಜಿಗಳ ಹಣ | 197,630,000 | 132,630,000 |
| ದೀರ್ಘಾವಧಿ ಸಾಲಗಳು ಚಾಲ್ತಿ ವರ್ಷದಲ್ಲಿ ಪರಿಪಕ್ವವಾದವುಗಳು | 238,745,308 | 246,444,344 |
| ಎನ್‌ಎಸ್‌ಟಿಎಫ್‌ಡಿಸಿಯಿಂದ ಪಡೆದ ಸಾಲಗಳಿಗೆ ಬಡ್ಡಿ ಬಾಕಿ ಇರುವುದು | 2,829,798 | 2,300,965 |
| ಶಾಸನಬದ್ಧ ಜವಾಬ್ದಾರಿಗಳು | 4,070,263 | 2,063,124 |
| ಇತರೇ ಪಾವತಿಗಳು | 80,527,709 | 138,211,806 |
| ಒಟ್ಟು | **1,735,051,762** | **1,515,373,155** |

| | | |
|---|---|---|
| **ಇತರೇ ಪಾವತಿಗಳು ಒಳಗೊಂಡಿರುವುದೇನೆಂದರೆ** | | |
| ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ ಪರವಾಗಿ ನಿಗ ಮದಲ್ಲಿರುವ ಹಣ | 54,802,079 | 98,664,079 |
| ಕರ್ನಾಟಕ ಸರ್ಕಾರಕ್ಕೆ ಜಾಮೀನಿನ ದಲ್ಲಾಳಿ | 4,218,190 | 3,473,782 |
| ಬಾಕಿ ಇರುವ ಜಬಾಬ್ದಾರಿಗಳು | 15,959,171 | 31,109,057 |
| ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ತೆರಬೇಕಾದಿದ್ದು | 940,352 | 970,352 |
| ಇಂಎಡಿ ಮತ್ತು ಭದ್ರತಾ ಠೇವಣಿಗಳು | 1,358,299 | 1,859,029 |
| ಫಲಾನುಭವಿಗಳಿಂದ ನಿರ್ವಾಹಕರ ವಂತಿಕೆ | 3,159,326 | 458,410 |

6.02. ಇ.ಎಸ್.ಸಿ.ಓ.ಎಮ್. ನಿಂದ ಸ್ವೀಕರಿಸಲಾದ ಕ್ಲೈಮ್ ಗಳ ಆಧಾರದ ಮೇಲೆ, ಬೋರ್ ವೆಲ್ ಗಳ ವಿದ್ಯುತೀಕರಣಕ್ಕಾಗಿ ಎಸ್ಕಾಮ್ ಗೆ ಪಾವತಿ ಮಾಡಿದ ಮೊತ್ತವನ್ನು, ಸರ್ಕಾರದಿಂದ ಸ್ವೀಕರಿಸಲಾದ ಅನುದಾನದ ಎದುರಿಗೆ, ವಿದ್ಯುತೀಕರಣ ಸಂಗ್ರಹ ನಿಧಿಯ ಅಡಿಯಲ್ಲಿ, ಸೆಟ್ ಆಫ್ ಮಾಡಲಾಗಿದೆ. ಹೇಗಾದರೂ, ಬೋರ್ವೆಲ್ ಗಳ ವಿದ್ಯುತೀಕರಣದ ಸಂಪೂರ್ಣ ಮಾಡುವಿಕೆಯ ಆಧಾರದ ಮೇಲೆ, ಕಾರ್ಪೊರೇಷನ್ ಪ್ರಾಯೋಜಿಸಿದ ಫಲಾನುಭವಿಗಳ ವಿವರಗಳೊಡನೆ ಯು.ಸಿ.ಗಳನ್ನು ಪಡೆಯಲು ಒಂದು ವ್ಯವಸ್ಥೆಯನ್ನು ಅಳವಡಿಸುವ ಪ್ರಯತ್ನಗಳು ನಡೆಯುತ್ತಿವೆ.

6.03. ಅಧಿಕೃತ ಷೇರ್ ಕ್ಯಾಪಿಟಲ್ ಮೊತ್ತ ರೂ. 20,00,00,000 ರಲ್ಲಿ, ಷೇರ್ ಅಪ್ಲಿಕೇಷನ್ ಮೊತ್ತವಾದ ರೂ. 19,76,30,000 ವು ಅನ್-ಇಶ್ಯೂಡ್ ಷೇರ್ ಕ್ಯಾಪಿಟಲ್ ನ ಭಾಗವಾದ ರೂ. 16,17,53,000 ಗಿಂತ ಹೆಚ್ಚಾಗಿದೆ.

6.04. ಅನುದಾನದ ನಿಯಮಾವಳಿಗಳ ಪ್ರಕಾರ, ಕಡೆಯ ದಿನಾಂಕದ ಒಳಗೆ ಕಂತುಗಳನ್ನು ಕಟ್ಟದೇ ಹೋದ ಪಕ್ಷದಲ್ಲಿ, ಎನ್.ಎಸ್.ಟಿ.ಎಫ್.ಡಿ.ಸಿ. ಯಿಂದ ಸ್ವೀಕರಿಸಿದ ಸಾಲದ ಮೇಲೆ, ಸಾಮಾನ್ಯವಾದ ಬಡ್ಡಿ ದರ 3 % ನ ಬದಲಾಗಿ, ಹೆಚ್ಚುವರಿ ಬಡ್ಡಿಯನ್ನು 4 % ಪ್ರಕಾರ ಪಾವತಿ ಮಾಡಬೇಕಾಗುತ್ತದೆ. ಈ ಮರುಪಾವತಿಯಲ್ಲಿ ಅಸಡ್ಡೆ ಇದ್ದರೂ, ಕಾರ್ಪೊರೇಷನ್ ಮಾಮೂಲಾದ 3 % ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತಿದೆ ಹಾಗೂ ಅದನ್ನು ಮುಂದುವರಿಸಿಕೊಂಡು ಹೋಗುತ್ತಿದೆ. ಈ ಸಾಲ ಮತ್ತು ಮಾಮೂಲು ದರದಲ್ಲಿ ವಸೂಲಾಗುತ್ತಿರುವ ಬಡ್ಡಿಯನ್ನು ಎನ್.ಎಸ್.ಟಿ.ಎಫ್.ಡಿ.ಸಿ. ಯು ಧೃಡೀಕರಿಸಿದೆ, ಹಾಗೂ ಕಾರ್ಪೊರೇಷನ್ ಯಾವುದೇ ರೀತಿಯ ಪೀನಲ್ ಬಡ್ಡಿಯನ್ನು ವಸೂಲು ಮಾಡುವ ಹಕ್ಕು ಅಥವಾ ಹೊಣೆಗಾರಿಕೆಯನ್ನು ಎದುರುನೋಡುತ್ತಿಲ್ಲ.

6.05. ಡಿ.ಟಿ.ಡಬಲ್ಯೂ ಗಾಗಿ ಟ್ರಸ್ಟ್ ಗಳಲ್ಲಿ ಇಟ್ಟಿರುವ, ಡಿ.ಟಿ.ಡಬಲ್ಯೂ ಗೆ ಬಜೆಟ್ ಹಂಚಿಕೆಯಡಿಯಲ್ಲಿ ಜಿ.ಓ.ಕೆ. ಯಿಂದ ಸ್ವೀಕರಿಸಲಾದ ಮತ್ತು ಬೇರೆ ಬ್ಯಾಂಕ್‌ನ ಉಳಿತಾಯ ಖಾತೆ ಮತ್ತು ಸ್ಥಿರ ಠೇವಣಿಗಳಲ್ಲಿ ಇಡಲಾಗಿರುವ ಹಣವನ್ನು, ಕಾರ್ಪೊರೇಷನ್ನಿನಿಂದ ಡಿ.ಟಿ.ಡಬಲ್ಯೂ ಅಥವಾ ಅದು ನಿಗದಿಸಿದ ಇತರ ಏಜೆನ್ಸಿಗಳಿಗೆ, ಕಾಲದಿಂದ ಕಾಲಕ್ಕೆ ನಿರ್ದೇಶನಾಲಯದ ಅಣತಿಯ ಮೇರೆಗೆ, ಅನುದಾನ ಮಾಡಲಾಗುತ್ತಿದೆ.

6.06. ಈ ಖಾತೆಯಲ್ಲಿ ಫಲಾನುಭವಿಗಳಿಂದ ಶೇಖರಿಸಲಾದ ಮೊತ್ತ ಮತ್ತು ವಾಹನ ಹಾಗೂ ಉಪಕರಣಗಳ ಸರಬರಾಜು ಮಾಡುವವರಿಗೆ ಪಾವತಿ ಮಾಡಿದ ಮೊತ್ತದೊಡನೆ (ಸಾಲ ಮತ್ತು ಮಾರ್ಜಿನ್ ಮನಿ ಘಟಕಗಳೊಡನೆ) ಸಮನ್ವಯ ಮಾಡುವುದು ಬಾಕಿ ಇರುವುದರಿಂದ, ಫಲಾನುಭವಿಗಳಿಂದ ದೊರಕುವ ಪ್ರವರ್ತಕರ ಕೊಡುಗೆಯನ್ನು ಇತ್ಯರ್ಥ ಮಾಡದೆ ಹಾಗೆಯೇ ಉಳಿಸಲಾಗಿದೆ. ಈ ಖಾತೆಗಳಲ್ಲಿ ಸಾಂದರ್ಭಿಕ ಹೊಂದಾಣಿಕೆಗಳು ಯಾವುದೇ ಇದ್ದಲ್ಲಿ, ಅವನ್ನು ಸಮನ್ವಯದ ನಂತರ ಪುಸ್ತಕಗಳಲ್ಲಿ ನಿರ್ವಹಿಸಲಾಗುತ್ತದೆ.

6.07. ಸಬ್ಸಿಡಿ, ಮಾರ್ಜಿನ್ ಮನಿ, ಅವಧಿ ಸಾಲ ಮತ್ತು ಪ್ರವರ್ತಕರ ಕೊಡುಗೆ ಮುಂತಾದುವುಗಳನ್ನು ಒಳಗೊಂಡ ಕೆಲವು ಯೋಜನೆ ಖಾತೆಗಳ ಸಂಬಂಧದಲ್ಲಿ, ಜಿಲ್ಲೆಗಳಲ್ಲಿ ಒಂದೇ ಒಂದು ಖಾತೆಯನ್ನು ನಿರ್ವಹಿಸಿದ್ದರೂ ಕೂಡಾ, ಮತ್ತು ಮುಖ್ಯ ಕಛೇರಿಯಿಂದ ಆಯಾ ಯೋಜನೆಗಳಡಿಯಲ್ಲಿ ಮೊತ್ತವನ್ನು ವರ್ಗಾಯಿಸಿದ್ದರೂ ಕೂಡಾ, ಕೆಲವು ಜಿಲ್ಲೆಗಳ ಕಾಂಪೊನೆಂಟ್ ಬ್ಯಾಂಕ್ ಖಾತೆಯಲ್ಲಿ 31.3.2013 ರಂದು ರೂ. 31,59,326 ದ ಕ್ರೆಡಿಟ್ ಬ್ಯಾಲೆನ್ಸ್ (ರೂ. 4,58,410) ಅನ್ನು, ತೀರ್ಮಾನವಾಗದ ಸಮನ್ವಯ ಹಾಗೂ ಕೆಲವು ಅವಶ್ಯಕ ಲೆಕ್ಕ ಪತ್ರ ಹೊಂದಾಣಿಕೆಗಳನ್ನು ಮಾಡಿದ ಮೇಲೆ, ಬೇರೆಯಾಗಿ ಕ್ರೆಡಿಟ್ ಬಾಧ್ಯತೆಯನ್ನಾಗಿ ತೋರಿಸಲಾಗಿದೆ. ಆದಾಗ್ಯೂ, ಇದು ಆದಾಯದ ಮೇಲೆ ಯಾವುದೇ ಪರಿಣಾಮವನ್ನು ಬೀರುವುದಿಲ್ಲ.

## ಅನುಸೂಚಿ . 7.01 ಸ್ಥಿರಾಸ್ಥಿಗಳು

(ರೂ.ಗಳಲ್ಲಿ)

| ವಿವರಗಳು | ಒಟ್ಟು ಬ್ಲಾಕ್ | | | | ಸವಕಳಿ | | | | | ನಿವ್ವಳ ಬುಕ್ ಮೌಲ್ಯ | |
|---|---|---|---|---|---|---|---|---|---|---|---|
| | 01.04.2012 ರಲ್ಲಿದ್ದಂತೆ | ಸೇರ್ಪಡೆ | ತೆಗೆದು ಹಾಕುವುದು/ ಹೊಂದಾಣಿಕೆ | 31.03.2013 ರಲ್ಲಿದ್ದಂತೆ | ದರ (%) | 31.3.2012 ರಲ್ಲಿದ್ದಂತೆ | ಈ ವರ್ಷಕ್ಕಾಗಿ | ತೆಗೆದು ಹಾಕುವುದು/ ಹೊಂದಾಣಿಕೆ | 31.03.2013 ರಲ್ಲಿದ್ದಂತೆ | 31.3.2013 | 31.3.2012 |
| **ಸುಸ್ಪಷ್ಟವಾದ ಆಸ್ತಿಗಳು** ಕಂಪ್ಯೂಟರ್ ಮತ್ತು ಭಾಗಗಳು (ಪೆರಿಫೆರಲ್) | 2,517,857 | 719,318 | 1,301,947 | **4,539,122** | 16.21 | 1,269,361 | 628,976 | 211,046 | 2,109,383 | 2,429,739 | 1,248,496 |
| ಪಿಠೋಪಕರಣಗಳು ಮತ್ತು ಜೋಡಣೆಗಳು | 2,759,379 | 351,220 | – | **3,110,599** | 6.33 | 385,297 | 184,150 | – | 569,447 | 2,541,152 | 2,374,082 |
| ವಾಹನಗಳು | 3,055,286 | 686,799 | – | **3,742,085** | 9.50 | 824,675 | 320,998 | – | 1,145,673 | 2,596,412 | 2,230,611 |
| ಕಛೇರಿ ಉಪಕರಣಗಳು | 2,577,860 | 815,440 | (1301947) | **2,091,353** | 4.75 | 304,986 | 72,620 | (211046) | 166,560 | 1,924,793 | 2,272,874 |
| **ಖಿಡಾಚಿಟ** | **10,910,182** | **2,572,777** | | **13,483,159** | | **2,784,319** | **1,206,744** | | **3,991,063** | **9,492,096** | **8,126,063** |

7.02. ಸ್ಥಿರ ಆಸ್ತಿಗಳ ರಿಜಿಸ್ಟರ್ ನವೀಕರಿಸಲ್ಪಡುತ್ತಿದೆ. ಇದು ಹೀಗಿರುವಾಗ, ಸ್ಥಿರ ಆಸ್ತಿಗಳ ಸಮನ್ವಯ ಮೊತ್ತವನ್ನು ಪುಸ್ತಕದ ಬಾಕಿಯೊಡನೆ ಸಮತೋಲಿಸುವುದು ಬಾಕಿಯಿದೆ.

7.03. ಸ್ಥಿರ ಆಸ್ತಿಗಳ ಭೌತಿಕ ಪರಿಶೀಲನೆಯನ್ನು ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ, ಮತ್ತು ಭೌತಿಕ ಬ್ಯಾಲೆನ್ಸ್ ಅನ್ನು ಪುಸ್ತಕ ಬ್ಯಾಲೆನ್ಸ್ ನೊಡನೆ ಸಮನ್ವಯ ಮಾಡಲು ಪ್ರಯತ್ನ ಮಾಡಲಾಗುತ್ತಿದೆ. ಮತ್ತು ಕೆಲಸಕ್ಕೆ ಬಾರದ ಸ್ವತ್ತುಗಳನ್ನು ಗುರುತಿಸಲಾಗುತ್ತಿದೆ. ಪರಿಶೀಲನೆ ಮತ್ತು ಸಮನ್ವಯ ಮಾಡಲು ಅವಶ್ಯಕವಾದ ಲೆಕ್ಕ ಪತ್ರಗಳ ಹೊಂದಾಣಿಕೆಗಳನ್ನು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದ

7.04. ಕೆಲವು ಆಸ್ತಿಗಳ ಮೂಲ ಬೆಲೆಯು 31.03.2012 ರ ಅಂತ್ಯದವರೆಗೆ ಕಛೇರಿ ಉಪಕರಣಗಳಲ್ಲಿ ತಪ್ಪಾಗಿ ಸೇರಿರುತ್ತದೆ. ಆದರೆ ಅದರ ಸವಕಳಿಯು ಸರಿಯಾಗಿ ಕಂಪ್ಯೂಟರ್ ಮತ್ತು ಭಾಗಗಳಿಗೆ ಅನ್ವಯಿಸುವ ದರದಲ್ಲಿಯೇ ಇರುತ್ತದೆ. ಇದನ್ನು ಪ್ರಸಕ್ತ ವರ್ಷದಲ್ಲಿ ಪುನರ್ ವಿಂಗಡಿಸಿ ಸವಕಳಿಯು ಸೇರಿದಂತೆ ಸರಿಯಾದ ಶೀರ್ಷಿಕೆಯಡಿಯಲ್ಲಿ ಸೇರಿಸಲಾಗಿದೆ.

## ಆಯವ್ಯಯದ ಹೇಳಿಕೆಗಳಲ್ಲಿ ಭಾಗ ರೂಪಿಸುವ ಟಿಪ್ಪಣಿಗಳು

| | | (ರೂ. ಗಳಲ್ಲಿ) |
|---|---|---|
| | **31.03.2013 ರಲ್ಲಿದ್ದಂತೆ** | **31.3.2012 ರಲ್ಲಿದ್ದಂತೆ** |
| **ಟಿಪ್ಪಣಿ ಸಂಖ್ಯೆ. 8.01 ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು ( ಭದ್ರ ಮತ್ತು ಉತ್ತಮವೆಂದು ಪರಿಗಣಿಸಿದ)** | | |
| ಅವಧಿ ಸಾಲಗಳು | 115,423,636 | 105,257,466 |
| ಅಂಚಿನ ಹಣ | 70,293,647 | 60,164,707 |
| ಸಾಲಗಳ ಮೇಲಿನ ಬಡ್ಡಿ | 20,570,407 | 13,289,529 |
| **ಒಟ್ಟು** | **206,287,690** | **178,711,702** |

### ಎ. ಷೆಡ್ಯೂಲ್ ಟ್ರೈಬ್ ಫಲಾನುಭವಿಗಳಿಗೆ, ಕರ್ನಾಟಕ ಸರ್ಕಾರದ ವಿವಿಧ ಯೋಜನೆಗಳಡಿಯಲ್ಲಿ ಸಾಲಗಳನ್ನು ಮನ್ನಾ ಮಾಡುವುದು, ಮತ್ತು ಕಾರ್ಪೊರೇಷನ್ನಿನ ಆರ್ಥಿಕ ಹೇಳಿಕೆಗಳ ಮೇಲೆ ಇದರ ಪರಿಣಾಮ

8.02. ಸರ್ಕಾರದ ಆದೇಶ ಸಂಖ್ಯೆ ಎಸ್.ಡಬಲ್ಯೂಡಿ 78 ಎಸ್.ಡಿ.ಸಿ. 2012 ದಿನಾಂಕ 18.05.2013 ರಲ್ಲಿ, ಕರ್ನಾಟಕ ಸರ್ಕಾರವು, ಕಾರ್ಪೊರೇಷನ್ನಿನಿಂದ ಷೆಡ್ಯೂಲ್ ಟ್ರೈಬ್ ಫಲಾನುಭವಿಗಳಿಗೆ ಕೊಡಲಾದ ಎಲ್ಲಾ ಸಾಲಗಳನ್ನೂ ಮತ್ತು ಅದರ ಮೇಲಿನ ಎಲ್ಲಾ ಬಡ್ಡಿಯನ್ನೂ 13.05.2013 ದಿನಾಂಕದಂತೆ, ನಿಗದಿ ಪಡಿಸಲಾದ ನಿಯಮಗಳ ಅಡಿಯಲ್ಲಿ, ಮನ್ನಾ ಮಾಡಿದೆ. ಮಂಜೂರಾತಿ ಮತ್ತು ಜಿ.ಒ.ಕೆ. ಯಿಂದ ಹಣದ ಮರುಪಾವತಿ, ಮತ್ತು ಮನ್ನಾಗೆ ಅರ್ಹವಿರುವ ವಿವಿಧ ಯೋಜನೆಗಳಡಿಯಲ್ಲಿ ಫಲಾನುಭವಿಗಳ ಪ್ರಕಾರ ಸಾಲ ಮತ್ತು ಅದರ ಮೇಲಿನ ಬಡ್ಡಿ ಇನ್ನೂ ಬಾಕಿ ಇರುವಾಗ ಮತ್ತು, ಜಿ.ಕೆ.ಎಸ್. ನ ಆರಂಭದ ಸಮಯದಿಂದ, 8.08 ರಡಿಯಲ್ಲಿ ಹೇಳಿರುವ ಸಾಲದ ಘಟಕವನ್ನು ಮತ್ತು ಅದರ ಮೇಲಿನ ಬಡ್ಡಿಯನ್ನು ಗುರುತಿಸದೆ ಇದ್ದು, 2012-13ರ ಆರ್ಥಿಕ ಹೇಳಿಕೆಯನ್ನು ಆಯಾ ಆರ್ಥಿಕ ಮಾದರಿಯಂತೆ ಆಯಾ ಯೋಜನೆಗಳ ಅಡಿಯಲ್ಲಿ (ಅಂದರೆ, ಸಬ್ಸಿಡಿ, ಮಾರ್ಜಿನ್ ಮನಿ ಮತ್ತು ಸಾಲ) ಅನ್ವಯಿಸುವಂತೆ ರಚಿಸಲಾಗಿದ್ದು, ಅಲ್ಲದೆ ಬಡ್ಡಿಯ ರೂಪದಲ್ಲಿ ಬರುವ ಆದಾಯವನ್ನು ಸಂಚಯದ ಆಧಾರದ ಮೇಲೆ ಗುರುತಿಸಿ, ಸಿಗ್ನಿಫಿಕಂಟ್ ಅಕೌಂಟಿಂಗ್ ಪಾಲಿಸಿ ಸೂಚನೆ ಸಂಖ್ಯೆ 1.13 ರ ಪ್ರಕಾರ, ಸಾಲ ಮತ್ತು ಅದರ ಮೇಲಿನ ಬಡ್ಡಿಯ ಮನ್ನಾ ಮಾಡುವುದರ ಪ್ರಭಾವವನ್ನು, ಮೇಲಿನ ಸರ್ಕಾರದ ಆದೇಶವನ್ನು ಪರಿಗಣಿಸದೆ, ಮಾಡಿದೆ. ಈ ಸಾಲ ಮತ್ತು ಅದರ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ಪ್ರಕ್ರಿಯೆಯ ಪ್ರಭಾವಗಳನ್ನು ಉಂಟುಮಾಡಲು, ಅವಶ್ಯಕವಾದ ಲೆಕ್ಕ ಪತ್ರ ಹೊಂದಾಣಿಕೆಗಳನ್ನು 2013-14 ರ ಆರ್ಥಿಕ ಹೇಳಿಕೆಗಳಲ್ಲಿ ತರುವ ಪ್ರಸ್ತಾಪವಿದೆ.

### ಬಿ. ಸಾಲದ ಲೆಡ್ಜರ್‌ಗಳನ್ನು ನಿರ್ವಹಿಸುವುದು :

8.03. ಗಂಗಾ ಕಲ್ಯಾಣ ಯೋಜನೆ ಯ ಅಡಿಯಲ್ಲಿ ವಿತರಣೆಯನ್ನು (ವೈ.ಎಮ್.ಡಿ. ಪಾವತಿಯನ್ನು ಹೊರತು) ಮತ್ತು ನೇರ ಸಾಲವನ್ನು ಮುಖ್ಯ ಕಛೇರಿಯಲ್ಲಿ ಕೇಂದ್ರೀಕೃತಗೊಳಿಸಲಾಗಿದೆ. ಮತ್ತು ಇತರ ಯೋಜನೆಗಳ ಅಡಿಯಲ್ಲಿ ವಿತರಣೆಯನ್ನು ವಿಕೇಂದ್ರೀಕರಿಸಿ, ಜಿಲ್ಲಾ ಕಛೇರಿಯ ಮಟ್ಟದಲ್ಲಿ ಇಡಲಾಗಿದೆ.

8.04. ಏಕೀಕೃತ ಯೋಜನೆಯ ಪ್ರಕಾರ ಸಾಲದ ಲೆಡ್ಜರ್ ಅನ್ನು ಮುಖ್ಯ ಕಛೇರಿಯಲ್ಲಿ ಇಟ್ಟು, ಆರ್ಥಿಕ ಹೇಳಿಕೆಗಳ ತಯಾರಿಕೆಯಲ್ಲಿ ಆಧಾರವಾಗಿ ಇಟ್ಟುಕೊಂಡು, ಎಕ್ಸೆಲ್ ಫಾರ್ಮ್ಯಾಟ್ ನಲ್ಲಿ ಪ್ರತಿ ತಿಂಗಳಿನ ವಿತರಣೆಗೆ ಮೊತ್ತ ನಮೂದುಗಳನ್ನು ಮಾಡಿ, ಫಲಾನುಭವಿಯ ಮತ್ತು ಪ್ರತಿ ವ್ಯವಹಾರದ ಪ್ರಕಾರ ವಿವರಗಳನ್ನು ಮತ್ತು ಮರುಪಾವತಿಯನ್ನು ಕೊಡದೆ, ವಾರ್ಷಿಕವಾಗಿ ಪಾಲಿಸಿಕೊಂಡು ಬರಲಾಗುತ್ತದೆ. ಫಲಾನುಭವಿಯ ಮತ್ತು ಪ್ರತಿ ವ್ಯವಹಾರದ ಪ್ರಕಾರ ಸಾಲದ ಲೆಡ್ಜರನ್ನು ಎಲ್ಲಾ ವಿಷಯದಲ್ಲಿಯೂ ಪೂರ್ತಿಯಾಗಿ ಪಾಲಿಸಿಕೊಂಡು ಬರಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದರಿಂದ ಸಾಲ ಲೆಡ್ಜರ್ ನಲ್ಲಿರುವ ಬಾಕಿಯೊಂದಿಗೆ ಪುಸ್ತಕದ ಬಾಕಿಯನ್ನು ಸಮನ್ವಯ ಮಾಡಲು ಸಹಾಯಕವಾಗುತ್ತದೆ.

8.05. ಡಿ.ಒ. ಗಳಲ್ಲಿ ಸಾಲದ ಲೆಡ್ಜರ್‌ಗಳನ್ನು ನಿರ್ವಹಿಸುವ ಪ್ರಕ್ರಿಯೆಯನ್ನು ಕ್ರಮಬದ್ಧವಾಗಿ ವ್ಯವಸ್ಥಿತ ಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ. ಏಕೆಂದರೆ, ಎಲ್ಲಾ ಯೋಜನೆಗಳಡಿಯಲ್ಲಿಯೂ, ಲೆಡ್ಜರ್ ಗಳನ್ನು ನವೀಕರಿಸುವ ಪ್ರಕ್ರಿಯೆಯನ್ನು ಸೇರಿದಂತೆ, ಫಲಾನುಭವಿಯ ಮತ್ತು ಪ್ರತಿ ವ್ಯವಹಾರದ ಪ್ರಕಾರ ವಿವರಗಳನ್ನು ಕೊಡುವ ವೇಳಾಪಟ್ಟಿಯನ್ನು ತಯಾರಿಸದೆ ಇರುವುದು, ಮತ್ತು ಸಾಲದ ಬಾಕಿಯನ್ನು ಮುಖ್ಯ ಕಛೇರಿಯ ಪುಸ್ತಕಗಳೊಡನೆ ಸಮನ್ವಯ ಮಾಡದೆ ಇರುವುದು - ಇಂತಹ ಕೆಲವು ಕೊರತೆಗಳನ್ನು ಗಮನಿಸಲಾಯಿತು.

8.06. ಮುಖ್ಯ ಕಛೇರಿಯಲ್ಲಿರುವ ಏಕೀಕೃತ ಸಾಲದ ಲೆಡ್ಜರ್ ಅನ್ನು, ಜಿಲ್ಲಾ ಕಛೇರಿಗಳಿಂದ ಬಂದ ಆರ್. ಮತ್ತು ಪಿ. ಹೇಳಿಕೆಗಳಲ್ಲಿ ನಮೂದಿಸಲಾದ ಸಾಲ, ಮಾರ್ಜಿನ್ ಮನಿ, ಮತ್ತು ಸಬ್ಸಿಡಿ ವಿತರಣೆ ಮತ್ತು ಅಸಲು ಮತ್ತು ಬಡ್ಡಿಯ ಮರುಪಾವತಿಯ ವಿವರಣೆಗಳ ಆಧಾರದ ಮೇಲೆ ನವೀಕರಿಸಲಾಗುತ್ತಿದೆ.

### ಸಿ. ಸಾಲಗಳಿಗೆ ಭದ್ರತೆ :

8.07. ಫಲಾನುಭವಿಗಳಿಗೆ ಕೊಡುವ ಸಾಲಗಳನ್ನು, ಆರ್ಥಿಕ ಸಹಾಯವನ್ನು ಕೊಡುವ ಆಯಾ ಯೋಜನೆಗಳ ಅಡಿಯಲ್ಲಿ, ಭದ್ರತೆಯಾಗಿ ಸ್ವೀಕರಿಸಿದ ಆಸ್ತಿಗಳ ಆಧಾರದ ಮೇಲೆ ಕೊಡಲಾಗುತ್ತದೆ. ಈ ಭದ್ರತೆಗಳ ಪ್ರಸ್ತುತ ಪರಿಸ್ಥಿತಿ, ಲಭ್ಯತೆ, ಪ್ರಸ್ತುತ ಮಾರುಕಟ್ಟೆ ಮೌಲ್ಯ, ದೊರಕಬಹುದಾದ

ಮೌಲ್ಯ, ಆಸ್ತಿಯ ಜಾರಿಯ ಸೌಲಭ್ಯ ಇವುಗಳ ಧೃಡೀಕರಣ ಆಗುವವರೆಗೆ, ಎಲ್ಲಾ ಸಾಲಗಳನ್ನೂ, ಭದ್ರವೆಂದೇ ಪರಿಗಣಿಸಲಾಗುತ್ತದೆ.

**ಡಿ. ಗಂಗಾ ಕಲ್ಯಾಣ ಯೋಜನೆ (ಜಿ.ಕೆ.ಎಸ್.) ಒಟ್ಟು ವೆಚ್ಚದಿಂದ ಸಾಲದ ಘಟಕವನ್ನು ಬೇರ್ಪಡಿಸದೆ ಇರುವುದು :**

8.08. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಸರ್ಕಾರೀ ಆದೇಶದ ಮೂಲವಾಗಿ, ಜಿ.ಒ.ಕೆ.ಯಿಂದ ಶಿಫಾರಸು ಮಾಡಲಾದ ಘಟಕದ ವೆಚ್ಚದಲ್ಲಿ, ಸಾಲ ಮತ್ತು ಸಬ್ಸಿಡಿ ಯ ಘಟಕಗಳೂ ಇರುತ್ತವೆ. 31.03.2010 ವರೆಗೆ ಜಾರಿಯಲ್ಲಿ ಇದ್ದ ಪ್ರತಿ ಘಟಕದ ವೆಚ್ಚ ರೂ. 1,00,000 (ಸಬ್ಸಿಡಿ ರೂ. 86,000 ಮತ್ತು ಸಾಲ ರೂ. 14,000) ಅನ್ನು ಹೆಚ್ಚಿಸಿ ರೂ. 1,50,000 (ವಿದ್ಯುತೀಕರಣವನ್ನು ಒಳಗೊಂಡಂತೆ) (ಸಬ್ಸಿಡಿ ರೂ. 1,00,000 ಮತ್ತು ಸಾಲ ರೂ. 50,000) ಜಿ.ಓ. ಸಂಖ್ಯೆ ಎಸ್.ಡಬಲ್ಯೂ.ಡಿ. 48 ಎಸ್.ಡಿ.ಸಿ. 2008, ದಿನಾಂಕ 12.11.2010. ಹೇಗೂ, ಆರಂಭದಿಂದ, ಬೋರ್ ವೆಲ್‌ನ ಇಡೀ ವೆಚ್ಚವನ್ನು (ಜಿ.ಓ. ನಿಂದ ಸ್ವೀಕೃತವಾದ ಪೂಲ್ಡ್ ನಿಧಿಯಿಂದ ಪೂರೈಸಲಾದ ಎಸ್ಕ್ರಾಮ್‌ಗೆ ಪಾವತಿಸಿದ ಹಣವನ್ನು ಹೊರತು) ಜಿ.ಓ. ನಿಂದ ಸ್ವೀಕರಿಸಿದ ಗ್ರಾಂಟ್‌ಗೆ, ಸಾಲ ಮತ್ತು ಸಬ್ಸಿಡಿ ಘಟಕಗಳನ್ನು ಪ್ರತ್ಯೇಕಿಸದೆ, ಚಾರ್ಜ್ ಮಾಡಲಾಗಿದೆ. ಜಿಲ್ಲಾ ಕಚೇರಿಗಳಲ್ಲಿ ಫಲಾನುಭವಿಗಳಿಂದ ಸ್ವೀಕೃತವಾದ ಸಾಲದ ಬಾಬತ್ತು ಮೊತ್ತದಲ್ಲಿ, ಸಬ್ಸಿಡಿ ಮೊತ್ತಕ್ಕಿಂತ ಹೆಚ್ಚು ಇರುವ ಮೊತ್ತವನ್ನು ಜಿ.ಓ. ದ ಗ್ರಾಂಟ್ ಲೆಕ್ಕಕ್ಕೆ ಜಮಾ ಮಾಡಲಾಗಿದೆ. 13.05.2013 ದಿನಾಂಕದಂತೆ, ಜಿ.ಒ.ಕೆ. ಯು ಮಾಡಿದ ಬಡ್ಡಿಯ ಸಹಿತ ಸಾಲದ ಮನ್ನಾ ಬಾಬತ್ತಿನಲ್ಲಿ (ಮೇಲೆ ಹೇಳಿರುವ 8.02 ರಲ್ಲಿ ವಿವರಿಸಿದಂತೆ) ಈ ವಿಷಯದಲ್ಲಿ ಜಿ.ಒ.ಕೆ.ಯಿಂದ ಕೇಳಲ್ಪಟ್ಟ, ಸಾಲ ಮತ್ತು ಬಡ್ಡಿಯ ವಿನಾಯಿತಿ ಅಥವಾ ಇನ್ನೇನಾದರೂ ಮರುಪಾವತಿ ಲೆಕ್ಕ ಪತ್ರ ಹೊಂದಾಣಿಕೆ ಏನಾದರೂ ಇದ್ದರೆ, ಅದನ್ನು 2013–14 ಲೆಕ್ಕದಲ್ಲಿ ಅಳವಡಿಸುವುದು.

**ಇ. ಜಿಲ್ಲಾ ಸಾಲ ಯೋಜನೆಯ ಅಡಿಯಲ್ಲಿ ಅವಧಿ ಸಾಲ ಮತ್ತು ಮಾರ್ಜಿನ್ ಮನಿಯನ್ನು ವಿಂಗಡಿಸುವಿಕೆ:**

8.09. ನೇರ ಸಾಲ ಯೋಜನೆಯಡಿಯಲ್ಲಿ, 31.03.2012 ರ ವರೆಗೆ ವಿತರಿಸಲಾದ ಮತ್ತು ಈ ಯೋಜನೆಯಡಿಯಲ್ಲಿ ಬುಕ್ ಮಾಡಲಾದ ನೇರ ಸಾಲದ ಮೊತ್ತವಾದ ರೂ. 3,84,92,285 ಮೊತ್ತವು, (ನೇರ ಸಾಲದ ಯೋಜನೆಯನ್ನು ಆರ್ಥಿಕ ವರ್ಷ 2012–13 ರಿಂದ ನಿಲ್ಲಿಸಲಾಯಿತು.) ಯೋಜನೆಯ ಮಾರ್ಗದರ್ಶಿಯ ಪ್ರಕಾರ, ನೇರ ಸಾಲ ಮತ್ತು ಮಾರ್ಜಿನ್ ಮನಿ ಎಂಬುದಾಗಿ ಇಬ್ಭಾಗಿಸುವಿಕೆಯಲ್ಲಿ ಇದೆ. ಈ ಇಬ್ಭಾಗಿಸುವಿಕೆಯು ಇನ್ನೂ ಇತ್ಯರ್ಥವಾಗಿಲ್ಲವಾಗಿ, ಈ ಇಡೀ ಮೊತ್ತವು ಮಾರ್ಜಿನ್ ಮನಿಗೆ ಅನ್ವಯವಾಗುವ 4 % ಬಡ್ಡಿಗೆ ಬದಲಾಗಿ ನೇರ ಸಾಲಕ್ಕೆ ಅನ್ವಯವಾಗುವ 6 % ಯನ್ನು ಆಕರ್ಷಿಸುತ್ತಿದೆ.

**ಎಫ್. ಸಾಲದ ಅಂಗೀಕಾರ ರಸೀದಿ ಮತ್ತು ಬಾಕಿಯ ಧೃಡೀಕರಣದ ಪಡೆಯುವ ಬಗ್ಗೆ**

8.10. ಸಾಲದ ಕಾಗದ ಪತ್ರಗಳು 3 ವರ್ಷ ಹಳೆಯದಾಗುವ ಮುಂಚೆ, ಲಾ ಆಫ್ ಲಿಮಿಟೇಷನ್ ನಿಂದ ಪ್ರಭಾವಿತವಾಗುವುದನ್ನು ತಪ್ಪಿಸಲು, ಮತ್ತು ವಿವಿಧ ಯೋಜನೆಗಳಡಿಯಲ್ಲಿ ಸಾಲಗಾರರಿಂದ ಬಾಕಿಯ ಧೃಡೀಕರಣ ಪತ್ರವನ್ನು ಪಡೆಯುವ ಮತ್ತು ಸಾಲಗಾರರಿಂದ ಸಾಲದ ಅಂಗೀಕಾರ ರಸೀದಿಯನ್ನು ಪಡೆಯುವ ಪ್ರಕ್ರಿಯೆಯು ಚಿಂತನೆಯಲ್ಲಿದೆ.

8.11. 13.05.2013 ದಿನಾಂಕದಂತೆ, ಕರ್ನಾಟಕ ಸರ್ಕಾರದ ನಿರ್ಧಾರದ ಪ್ರಕಾರ, ಬಾಕಿ ಇರುವ ಸಾಲ ಮತ್ತು ಅದರ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ನಿಶ್ಚಯದಿಂದಾಗಿ, ಈ ನಿಶ್ಚಯದಿಂದ 2013–14 ವರ್ಷದ ಆರ್ಥಿಕ ಹೇಳಿಕೆಗಳಲ್ಲಿ (ಮೇಲಿರುವ 8.02 ಸೂಚನೆಯಂತೆ), ಸಾಲಗಳಿಗೆ ಇರುವ ಭದ್ರತೆ/ಆಸ್ತಿಯ ಲಭ್ಯತೆ, ಮತ್ತು ಮೌಲ್ಯಗಳ ಪ್ರಸ್ತುತ ಪರಿಸ್ಥಿತಿಯನ್ನು ಧೃಡೀಕರಿಸದೆ ಇರುವುದರಿಂದ (8.07), ಜಿ.ಕೆ.ಎಸ್.

## ಆಯವ್ಯಯದ ಹೇಳಿಕೆಗಳಲ್ಲಿ ಭಾಗ ರೂಪಿಸುವ ಟಿಪ್ಪಣಿಗಳ

(ರೂ. ಗಳಲ್ಲಿ)

| | 31.03.2013 ರಲ್ಲಿದ್ದಂತೆ | 31.3.2012 ರಲ್ಲಿದ್ದಂತೆ |
|---|---|---|
| **ಟಿಪ್ಪಣಿ ಸಂಖ್ಯೆ : 9.01 ನಗದು ಮತ್ತು ಬ್ಯಾಂಕ್ ಶಿಲ್ಕುಗಳು ನಗದು ನಗದಿಗೆ ಸಮಾನವಾದವು** | | |
| (ಎ) ಕೈಯಲ್ಲಿರುವ ನಗದು | 2,880 | 26,336 |
| **(ಬಿ) ಬ್ಯಾಂಕ್‌ಗಳಲ್ಲಿರುವ ಶಿಲ್ಕುಗಳು** | | |
| (1) ಷೆಡ್ಯೂಲ್ ಬ್ಯಾಂಕ್‌ಗಳ ಉಳಿತಾಯ ಖಾತೆಗಳಲ್ಲಿ – ಪ್ರಧಾನ ಕಛೇರಿ | 249,862,661 | 250,677,328 |
| – ಜಿಲ್ಲಾ ಕಛೇರಿಗಳಲ್ಲಿ | 187,778,205 | 120,065,460 |
| (2) ಷೆಡ್ಯೂಲ್ ಬ್ಯಾಂಕ್‌ಗಳ ಅವಧಿ ಠೇವಣಿಗಳಲ್ಲಿ – ಅಲ್ಪಾವಧಿ | 1,680,379,337 | 1,372,771,148 |
| (ಸಿ) ವರ್ಗಾವಣೆಯಲ್ಲಿರುವ ನಿಧಿಗಳು | 57,176,840 | 19,819,871 |
| ಒಟ್ಟು | **2,175,199,923** | **1,763,360,143** |

9.02 ಪ್ರಧಾನ ಕಛೇರಿಗಳ ಶಿಲ್ಕುಗಳಿಗೂ ಜಿಲ್ಲಾ ಕಛೇರಿಗಳಿಂದ ಪಡೆದಿರುವ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆಗಳ ಪ್ರಕಾರ ಕೆಲವು ಜಿಲ್ಲಾ ಕಛೇರಿಗಳ ಬ್ಯಾಂಕ್ ಖಾತೆಗಳ ಪ್ರಾರಂಭಿಕ ಮತ್ತು ಮುಕ್ತಾಯದ ಶಿಲ್ಕುಗಳಲ್ಲಿ ಕೆಲವು ವ್ಯತ್ಯಾಸಗಳು ಕಂಡುಬಂದಿರುತ್ತವೆ, ಇವುಗಳನ್ನು ಹೊಂದಾಣಿಕೆಯಿಂದ ಸಮನ್ವಯ ಮಾಡುವುದು ಅವಶ್ಯಕ.

| ವಿವರಗಳು | ಪ್ರಧಾನ ಕಛೇರಿಯಂತೆ ಶಿಲ್ಕುಗಳು | ಆರ್ & ಪಿ ತ:ಖ್ತೆಯಂತೆ ಶಿಲ್ಕಗಳು |
|---|---|---|
| ಪ್ರಾರಂಭಿಕ ಶಿಲ್ಕು 1.4.2012 ರಂದು | 119,607,049 | 120,781,759 |
| ಅಂತಿಮ ಶಿಲ್ಕು 31.3.2013 ಕ್ಕೆ | 83,429,562 | 78,470,587 |

9.03. ಸಂಬಂಧಪಟ್ಟ ಬ್ಯಾಂಕ್‌ಗಳಿಂದ ಧೃಡೀಕರಣ ಪತ್ರವನ್ನು ಕೇಳಿದ್ದರೂ, ರಾಮನಗರಮ್ ಜಿಲ್ಲಾ ಕಛೇರಿಯ ಮೊತ್ತ ಪುಸ್ತಕ ಬಾಕಿ ರೂ. ಸೊನ್ನೆ (ರೂ. 9,87,384 ದಿನಾಂಕ 31.03.2012 ನ ಪ್ರಕಾರ) ಏಳು ಬ್ಯಾಂಕ್ ಖಾತೆಗಳ ಪಾಸ್ ಷೀಟ್ ಮತ್ತು ಬಾಕಿ ಧೃಡೀಕರಣ ಲಭ್ಯವಿಲ್ಲ.

9.04. ವಾಯಿದಾ ಠೇವಣಿಯ ಕೆಳಗೆ ತೋರಿಸಿರುವ ಮೊತ್ತವನ್ನು ಸೂಚನೆ ಸಂಖ್ಯೆ 11.02 (ಐ) ಯೊಡನೆ ಓದಬೇಕು.

9.05. ಎಲ್ಲಾ ಬ್ಯಾಂಕ್ ಗಳಿಂದಲೂ ಧೃಡೀಕರಣವನ್ನು ಕೇಳಿದ್ದರೂ, ವಾಯಿದಾ ಠೇವಣಿಗಳಲ್ಲಿ ಇರುವ ಮೊತ್ತಗಳು (ಜಿಲ್ಲಾ ಕಚೇರಿಗಳಲ್ಲಿ ಇರುವ ರೂ. 5,060,000 ಸೇರಿದಂತೆ) ರೂ. 60,00,00,000 (ರೂ. 1,372,771,000) ಈ ಧೃಡೀಕರಣ ದೊರಕಲಿಲ್ಲ.

**ಟಿಪ್ಪಣಿ ಸಂಖ್ಯೆ 10 : ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು (ಬೇರೆ ಹೇಳಿಕೆ ಕೊಡದಿದ್ದಲ್ಲಿ, ಅಸುರಕ್ಷಿತ ಸಾಲವನ್ನು ಒಳ್ಳೆಯ ಸಾಲವೆಂದೇ ಪರಿಗಣಿಸಲಾಗುತ್ತದೆ.) (ನಗದು ಅಥವಾ ಇತರೆ ವಿಧಾನದಲ್ಲಿ ಪಡೆದುಕೊಳ್ಳಲು ಸಾಧ್ಯವಾಗುವ)**

| | 31.03.2013 ರಲ್ಲಿದ್ದಂತೆ | 31.3.2012 ರಲ್ಲಿದ್ದಂತೆ |
|---|---|---|
| ನೌಕರರಿಗೆ ಮುಂಗಡಗಳು | 46,000 | 122,326 |
| ಪೆಟ್ರೋಲ್ ಬಂಕ್‌ಗಳಲ್ಲಿರುವ ಠೇವ'ಣಿಗಳು | 80,000 | 40,000 |
| ದೂರವಾಣಿ ಠೇವಣಿಗಳು | 8,629 | 8,629 |
| ಇತರೆ | – | 550,000 |
| ಒಟ್ಟು | **134,629** | **720,955** |

| **ಟಿಪ್ಪಣಿ ಸಂಖ್ಯೆ 11 ಇತರೆ ಚಾಲ್ತಿ ಆಸಿಗಳು** | | |
|---|---|---|
| ಅವಧಿ ಠೇವಣಿಗಳ ಮೇಲೆ ಬರಬೇಲಾದ ಬಡ್ಡಿಗಳು | 24,807,637 | 24,995,259 |
| ಇತರೇ ಸ್ವೀಕೃತಿಗಳು | 7,861 | 6,733,524 |
| ಜಿಲ್ಲಾ ವ್ಯವಸ್ಥಾಪಕರು ರಾಯಚೂರು ಜಿಲ್ಲೆ | 70,065,867 | – |
| ಒಟ್ಟು | **94,881,365** | **31,728,783** |

11.02 ಇತರೆ ಸ್ವೀಕೃತಿಗಳು ಈ ಕೆಳಕಂಡವುಗಳನ್ನು ಒಳಗೊಳ್ಳುತ್ತವೆ :

(1) ರೂ. ಸೊನ್ನೆ (ರೂ. 5992036) ವರ್ಷದಲ್ಲಿ ಪ್ರವರ್ಧಮಾನಕ್ಕೆ (ಮೆಚೂರಿಟಿ) ಬಂದ ರಿನ್ಯೂ ಮಾಡಲ್ಪಟ್ಟ ವಾಯಿದಾ ಠೇವಣಿಗಳ ಮೇಲಿನ ಬಡ್ಡಿ. ಇದು ರಿನ್ಯೂ ಮಾಡಲಾದ ವಾಯಿದಾ ಠೇವಣಿಯ ಭಾಗವಾಗಿ, ಬಂಡವಾಳಕ್ಕಾಗಿ ಅದೇ ಠೇವಣಿಗಳಿಗೆ ಲಿಂಕ್ ಮಾಡುವ ಪ್ರಕ್ರಿಯೆಯು ಇನ್ನೂ ಆಗಿಲ್ಲವಾದ್ದರಿಂದ.

(2) ರೂ. ಸೊನ್ನೆ (ರೂ. 7,33,627) 2.08.2011 ರಂತೆ ಪೀಠೋಪಕರಣ ಮತ್ತು ಇತರ ಫಿಕ್ಸ್ಚರ್ ಗಳ (ಮೂಲ ಮೊತ್ತ ರೂ. 7,00,000) ಕಡಿಮೆ ಮೌಲ್ಯದ ಮೊತ್ತ, ಮತ್ತು ಮಾಜಿ ಅಧ್ಯಕ್ಷೆಯೊಬ್ಬರಿಗೆ ಅವರ ಅಧಿಕೃತ ನಿವಾಸದಲ್ಲಿ ಕೊಡಲಾದ, ಆದರೆ ಅವರು 2.8.2011 ರಲ್ಲಿ ತಮ್ಮ ಪದವಿಯನ್ನು ಬಿಟ್ಟು ಹೋದಾಗ ಹಿಂತಿರುಗಿಸದೆ ಇದ್ದ ಕಛೇರಿ ಉಪಕರಣಗಳು (ಮೂಲ ಮೊತ್ತ ರೂ. 43,320). ಪಿ.ಡಬಲ್ಯೂ.ಡಿ. ಮೌಲ್ಯಮಾಪನದ ಪ್ರಕಾರ ಉಳಿಸಿಕೊಳ್ಳಲಾದ ವಸ್ತುಗಳ ಲೆಕ್ಕದಲ್ಲಿ ಸ್ವೀಕರಿಸಲಾದ ರೂ. 6,98,702 ರಲ್ಲಿ, ವ್ಯಾಟ್ ಗಾಗಿ ನೇಮಿಸಿದ ರೂ. 36,425 ಅನ್ನೂ, ಮತ್ತು ಇನ್ನೂ ಸ್ವೀಕರಿಸಬೇಕಾದ ಮೊತ್ತವೆಂದು ತೋರಿಸಿದ ರೂ. 6,62,277 ಅನ್ನೂ ಕಳೆದ ಮೇಲೆ, ಉಳಿಯುವ, ಆದರೆ ವಸೂಲು ಮಾಡಲಾಗದ ಬಾಕಿ ರೂ. 71,350 ಅನ್ನು ಲಾಭ ನಷ್ಟದ ಹೇಳಿಕೆಯಲ್ಲಿ ಉಳಿಕೆ ಹಣ ಎಂದು ತೋರಿಸಲಾಗಿದೆ.

(3) ಆರ್ಥಿಕ ವ್ಯವಹಾರಗಳಲ್ಲಿ ಗಮನಿಸಲಾದ ಕೆಲವು ಅಕ್ರಮಗಳ ಕಾರಣದಿಂದಾಗಿ, ಮತ್ತು ಆಂತರಿಕ ತಂಡವು ನಡೆಸಿದ 01.04.2010 ನಿಂದ 17.06.2013 ವರೆಗಿನ ವ್ಯವಹಾರಗಳಿಗೆ ಸಂಬಂಧಪಟ್ಟ ಕೆಲವು ಸಂಶೋಧನೆಗಳಿಂದ, ರಾಯಚೂರಿನ ಜಿಲ್ಲಾ ಕಛೇರಿಯಲ್ಲಿ ನಡೆದ ಹಣದ ದುರುಪಯೋಗದ ವಿಷಯದಲ್ಲಿ, ಕಾರ್ಪೊರೇಷನ್ ಈ ವಿಷಯವನ್ನು ಲೋಕಾಯುಕ್ತರ ಗಮನಕ್ಕೆ ತಂದಿದೆ. ಲೋಕಾಯುಕ್ತರು ಲೆಕ್ಕ ಪತ್ರಗಳ ಪುಸ್ತಕಗಳನ್ನು, ಮತ್ತಿತರ ದಾಖಲೆಗಳನ್ನು ಜಪ್ತು ಮಾಡಿ, ತನಿಖೆಯನ್ನು ಕೈಗೆತ್ತಿಕೊಂಡಿದ್ದಾರೆ. ಲೋಕಾಯುಕ್ತರ ತನಿಖೆ ಮತ್ತು ಅದರ ಪರಿಣಾಮವು ಇನ್ನೂ ಬಂದಿಲ್ಲವಾದ್ದರಿಂದ, 1.4.2012 ದಿನಾಂಕದಂತೆ ರಾಯಚೂರಿನ ಜಿಲ್ಲಾ ಕಛೇರಿಯ 7 ಯೋಜನೆ ಬ್ಯಾಂಕ್ ಖಾತೆಗಳಲ್ಲಿ ಬಾಕಿಯನ್ನು, ಮುಖ್ಯ ಕಛೇರಿಯ ಖಾತೆಯಿಂದ ಈ ವರ್ಷದಲ್ಲಿ ಜಿಲ್ಲಾ ಕಛೇರಿಯ ಈ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾದ ನಿವ್ವಳ ಮೊತ್ತ ರೂ. 6,95,29,473 ಮತ್ತು 31.03.2013 ನಲ್ಲಿ ಜಿಲ್ಲಾ ಕಛೇರಿಯಲ್ಲಿ ಕಲೆಕ್ಷನ್ ಖಾತೆಯಲ್ಲಿ ಬಾಕಿಯಾದ ರೂ. 5,36,394 -- ಇವನ್ನು ರಾಯಚೂರು ಜಿಲ್ಲಾ ಮ್ಯಾನೇಜರ್‌ರವರಿಂದ ಬಾಕಿ ಎಂದು ತೋರಿಸಲಾಗಿದೆ. ಇದರಿಂದ ಆರ್ಥಿಕ ಹೇಳಿಕೆಯ ಮೇಲೆ ಆಗುವ ಪ್ರಭಾವವನ್ನು ಈ ಹಂತದಲ್ಲಿ ನಿಖರವಾಗಿ ಹೇಳಲಾಗುವುದಿಲ್ಲ, ಮತ್ತು ದುರುಪಯೋಗ ಪಡಿಸಲಾದ ಬಾಕಿಯನ್ನು ಮತ್ತೆ ಪಡೆದುಕೊಳ್ಳುವುದಕ್ಕಾಗಿ, ತೆಗೆದುಕೊಳ್ಳಬೇಕಾದ ಮುಂದಿನ ಸೂಕ್ತ ಕ್ರಮಗಳು ಮತ್ತು ಇತರ ಲೆಕ್ಕ ಪತ್ರಗಳ ಹೊಂದಾಣಿಕೆಯನ್ನು, ತನಿಖೆಯ ವರದಿಯನ್ನು ಆಧಾರಿಸಿ ಮುಂದೆ ಮಾಡಬೇಕಾಗುತ್ತದೆ.

## ಆಯವ್ಯಯದ ಹೇಳಿಕೆಗಳಲ್ಲಿ ಭಾಗ ರೂಪಿಸಿರುವ ಟಿಪ್ಪಣಿಗಳು

(ರೂ.ಗಳಲ್ಲಿ)

| | 2012–13 | 2011–12 |
|---|---|---|
| **ಟಿಪ್ಪಣಿ ಸಂಖ್ಯೆ : 12.01 ವ್ಯವಹಾರಗಳಿಂದ ಆದಾಯ** | | |
| ಫಲಾನುಭವಿಗಳಿಗೆ ನೀಡಿರುವ ಸಾಲಗಳ ಮೇಲಿನ ಬಡ್ಡಿ | 9,160,401 | 8,554,783 |
| ಒಟ್ಟು | **9,160,401** | **8,554,783** |

12.02. ಉಪೇಕ್ಷೆ ಮಾಡಿದ ಸಂದರ್ಭದಲ್ಲಿ ಹೆಚ್ಚುವರಿ ಬಡ್ಡಿಯನ್ನು ವಿಧಿಸಬೇಕೆಂದು ಸಾಲ ದಾಖಲೆಗಳಲ್ಲಿ ನಮೂದಿಸಿದ್ದರೂ, ವಿವಿಧ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ಕೊಡಲಾದ ಸಾಲದ ಮೇಲೆ ಸಾಮಾನ್ಯ ಬಡ್ಡಿ ದರದಲ್ಲಿ ಅವಧಿ ಸಾಲದ ಮೇಲೆ 6 % ರಂತೆಯೂ, ಮಾರ್ಜಿನ್ ಮನಿಯ ಮೇಲೆ 4 % ರಂತೆಯೂ ಬಡ್ಡಿಯನ್ನು ವಿಧಿಸಲಾಗಿದೆ. ಉಪೇಕ್ಷೆ ಮಾಡಿದ ಸಂದರ್ಭಗಳಲ್ಲಿ, ಹೆಚ್ಚುವರಿ ಬಡ್ಡಿಯನ್ನು ವಿಧಿಸದೆ ಇದ್ದುದರಿಂದ ಕಳೆದುಕೊಂಡ ಬಡ್ಡಿಯನ್ನು ಖಚಿತಪಡಿಸಿಲ್ಲ.

12.03. ಜಿ.ಕೆ.ಎಸ್. ನ ಅಡಿಯಲ್ಲಿ ಪ್ರತಿ ಬೋರ್‌ವೆಲ್ ಘಟಕದ ಮೊತ್ತ ವೆಚ್ಚದಲ್ಲಿ ಸಾಲದ ಭಾಗವನ್ನು ಪ್ರತ್ಯೇಕಿಸದೆ ಇರುವುದರಿಂದ, ಸೂಚನೆ 8.08 ನ ಪ್ರಕಾರ ಪ್ರತಿ ಘಟಕದ ವೆಚ್ಚವನ್ನು ನಮೂದಿಸಿರುವ ಸಂಬಂಧಪಟ್ಟ ಜಿ.ಒ. ಗಳಲ್ಲಿ, 31.03.2013 ವರೆಗೆ ವಿತರಿಸಲಾದ ಸಾಲಗಳ ವಿಷಯದಲ್ಲಿ ಬಡ್ಡಿಯ ಭಾಗವನ್ನು ಧೃಡೀಕರಿಸದೆ ಅದನ್ನು ಪುಸ್ತಕಗಳಲ್ಲಿ ನಮೂದಿಸಿರುವುದರಿಂದ, ಇದರ ಪ್ರಭಾವವು 31.03.2013 ರ ವರಗಿನ ಆರ್ಥಿಕ ವರ್ಷದಲ್ಲಿ ಆರ್ಥಿಕ ಹೇಳಿಕೆಗಲ ಮೇಲೆ ಹೇಗೆ ಆಗುತ್ತದೆಂದು ಖಚಿತಪಡಿಸಿಲ್ಲ. ಒಂದು ವೇಳೆ 31.03.2013 ವರೆಗೆ ಬಡ್ಡಿಯನ್ನು ವಿಧಿಸಿದರೂ, ಹಾಗೂ ಅದನ್ನು ಆಯಾ ವರ್ಷಗಳ ವರಮಾನ ಎಂದು ಪರಿಗಣಿಸಿದರೂ, 31.03.2013 ರ ತನಕದ ವಸೂಲು ಮಾಡಲಾಗದ ಬಡ್ಡಿಯನ್ನು, ಜಿ.ಒ. ದಿನಾಂಕ 18.05.2013 ನ, ಸೂಚನೆ 8.02 ರ ಪ್ರಕಾರ, 13.05.2013 ನಂದು ಬಾಕಿ ಇರುವ ಇತರ ಸಾಲದ ಜತೆಗೆ ಮನ್ನಾ ಮಾಡಲು ಅರ್ಹತೆ ಇರುತ್ತದೆ.

| | 2012–13 | 2011–12 |
|---|---|---|
| **ಟಿಪ್ಪಣಿ ಸಂಖ್ಯೆ : 12 ಎ ಇತರೆ ಆದಾಯ** | | |
| ಅವಧಿ ಠೇವಣಿಗಳು ಮತ್ತು ಬ್ಯಾಂಕ್‌ಗಳ ಉಳಿತಾಯ ಖಾತೆಗಳ ಮೇಲಿನ ಬಡ್ಡಿ (ಟಿಡಿಎಸ್ ಇಲ್ಲ) | 106,512,785 | 82,796,463 |
| ಇತರೆ ಆದಾಯ | 5,755 | 117,891 |
| ಒಟ್ಟು | **106,518,540** | **82,914,354** |

12.04 ಸ್ಥಿರ ಠೇವಣಿಯ ಮೇಲೆ ಮತ್ತು ಉಳಿತಾಯ ಖಾತೆಯ ನಿಗದಿತ ಬ್ಯಾಂಕ್ ಖಾತೆಯಲ್ಲಿ (ಸೂಚನೆ ಸಂಖ್ಯೆ 6.05, ಸಿಗ್ನಿಫಿಕಂಟ್ ಅಕೌಂಟಿಂಗ್ ಪಾಲಿಸಿ ಸೂಚನೆ ಸಂಖ್ಯೆ 1.11 ನ ಮೇರೆಗೆ ಇದ್ದ ಮೊತ್ತದ ಮೇಲೆ ಮೇಲೆ ಬಡ್ಡಿ ರೂ. 94,24,339 (ರೂ. 79,62,239) ವನ್ನು (ಟ್ರಸ್ಟ್ ನಲ್ಲಿ ಡಿ.ಟಿ.ಡಬಲ್ಯೂ ಗಾಗಿ), ಒಳಗೊಂಡಿದೆ.

| | 2012–13 | 2011–12 |
|---|---|---|
| **ಟಿಪ್ಪಣಿ ಸಂಖ್ಯೆ : 13 ನಿರ್ದೇಶಕರುಗಳ ಸಂಭಾವನೆ** | | |
| **ಅಧ್ಯಕ್ಷರು** | | |
| ಸಂಭಾವನೆ | 47,523 | 32,000 |
| ಮನೆ ಬಾಡಿಗೆ ಭತ್ಯೆ | – | 120,000 |
| ಪ್ರಯಾಣ ಭತ್ಯೆ | 20,793 | 340,844 |
| ವೈದ್ಯಕೀಯ ಖರ್ಚುಗಳ ವಾಪಸ್ಸು | – | 24,421 |
| ಉಪ ಒಟ್ಟು | **68,316** | **517,265** |
| **ವ್ಯವಸ್ಥಾಪಕ ನಿರ್ದೇಶಕರು** | | |
| ಸಂಬಳ ಮತ್ತು ಭತ್ಯೆಗಳು | 866,471 | 590,071 |
| ಪಿಂಚಣಿ, ಗ್ರಾಚ್ಯುಯಿಟಿ ಮತ್ತು ರಜಾ ನಗದೀಕರಣ | 176,557 | 75,523 |
| ಉಪ ಒಟ್ಟು | **1,043,028** | **665,594** |
| ಒಟ್ಟು | **1,111,344** | **1,182,859** |

| | 2012–13 | 2011–12 |
|---|---|---|
| **ಟಿಪ್ಪಣಿ ಸಂಖ್ಯೆ : 14 ನೌಕರರ ವೆಚ್ಚಗಳು** | | |
| ಸಂಬಳ ಮತ್ತು ಭತ್ಯೆಗಳು | 10,765,385 | 10,376,382 |
| ಪಿಂಚಣಿ, ಗ್ರಾಚ್ಯುಯಿಟಿ ಮತ್ತು ರಜಾ ನಗದೀಕರಣ | 801,533 | 847,985 |
| ವೈದ್ಯಕೀಯ ಖರ್ಚುಗಳ ವಾಪಸ್ಸು | – | 83,691 |
| ಇಎಲ್ ನಗದೀಕರಣ | – | 222,574 |
| ಹೊರ ಗುತ್ತಿಗೆ ನೌಕರರ ನಿರ್ವಹಣಾ ಖರ್ಚುಗಳು | 4,831,708 | 4,074,348 |
| ಒಟ್ಟು | **16,398,626** | **15,604,980** |

| | 2012–13 | 2011–12 |
|---|---|---|
| **ಟಿಪ್ಪಣಿ ಸಂಖ್ಯೆ 15 ಹಣಕಾಸಿನ ವೆಚ್ಚಗಳು** | | |
| ಎನ್ ಎಸ್ ಟಿ ಎಫ್ ಡಿ ಸಿ ಗಳಿಂದ ಪಡೆದ ಅವಧಿ ಸಾಲಗಳ ಮೇಲಿನ ಬಡ್ಡಿ | 11,953,051 | 10,235,334 |
| ಸರ್ಕಾರಕ್ಕೆ ನೀಡಬೇಕಾದ ಭರವಸೆ ದಳ್ಳಾಳಿ | 4,202,767 | 3,473,782 |
| ಬ್ಯಾಂಕ್ ಶುಲ್ಕಗಳು | 32,113 | 70,651 |
| ಒಟ್ಟು | **16,187,931** | **13,779,767** |

| | 2012–13 | 2011–12 |
|---|---|---|
| **ಟಿಪ್ಪಣಿ ಸಂಖ್ಯೆ : 16 ಇತರೆ ಖರ್ಚುಗಳು** | | |
| ಜಾಹೀರಾತು ಮತ್ತು ಅಧಿಸೂಚನಾ ವೆಚ್ಚಗಳು | 1,148,743 | 169,519 |
| ಎಎಂಸಿ ವೆಚ್ಚಗಳು | 36,635 | 63,357 |
| ಲೆಕ್ಕ ಪರಿಶೋಧಕರ ಶುಲ್ಕ – ಶಾಸನಬದ್ಧ ಲೆಕ್ಕಪರಿಶೋಧ'ನಾ ವೆಚ್ಚ | 140,450 | 112,360 |
| ವಿದ್ಯುತ್ ಮತ್ತು ನೀರಿನ ವೆಚ್ಚಗಳು | 108,673 | 138,538 |
| ಪಿಲ್ಲಿಂಗ್ ವೆಚ್ಚ | 74,600 | – |
| ಸಾಮಾನ್ಯ ವೆಚ್ಚಗಳು | 210,118 | 39,702 |
| ಕಾನೂನು ಮತ್ತು ವೃತ್ತಿಪರ ವೆಚ್ಚಗಳು | 302,884 | 101,516 |
| ಸಭೆ ಮತ್ತು ವಿಚಾರ ಸಂಕೀರ್ಣಗಳ ವೆಚ್ಚಗಳು | 1,926,583 | 485,049 |
| ವಾರ್ತಾ ಪತ್ರಿಕೆ ಮತ್ತು ನಿಯತಕಾಲಿಕಗಳು | 6,757 | 6,995 |
| ಕಛೇರಿ ನಿರ್ವಹಣೆ | 482,573 | 224,551 |
| ಅಂಚೆ ಮತ್ತು ದೂರವಾಣಿ ವೆಚ್ಚಗಳು | 397,189 | 245,939 |
| ಮುದ್ರಣ ಮತ್ತು ಲೇಖನಾ ಸಾಮಗ್ರಿಗಳು | 1,379,519 | 2,253,004 |
| ಕಟ್ಟಡದ ಬಾಡಿಗೆ | 629,871 | 66,000 |
| ದರಗಳು ಮತ್ತು ತೆರಿಗೆಗಳು | 886,452 | – |
| ಅಧ್ಯಯನ ಮತ್ತು ಸಮಾಲೋಚನೆಗಳು | 596,000 | 238,880 |
| ಪ್ರಯಾಣ ಮತ್ತು ವಾಹನ ಭತ್ಯೆ | 347,759 | 432,118 |
| ವಾಹನಗಳ ನಿರ್ವಹಣೆ | 847,452 | 822,880 |
| ವಾಹನಗಳ ಬಾಡಿಗೆ | 1,317,999 | 1,165,517 |
| ಸ್ಥಿರಾಸ್ತಿಯ ವಿಲೇವಾರಿಯಿಂದ ಉಳಿದಿರುವ ಮೊಬಲಗು ( ಟಿಪ್ಪಣಿ ಸಂಖ್ಯೆ: 11.02(ii) | 71,350 | 190,834 |
| ಒಟ್ಟು | **10,911,607** | **6,756,759** |

17.01 ಕಂಪನಿಗಳ ಕಾಯ್ದೆ, 1956ರ ಪರಿಷ್ಕೃತ ಪಟ್ಟಿ 6 ರಲ್ಲಿ ನಿಗಧಿಪಡಿಸಿರುವ ಪದ್ಧತಿಯಲ್ಲಿಯೇ ಆರ್ಥಿಕ ತಃಖ್ತೆಗಳನ್ನು ತಯಾರಿಸಲಾಗಿದೆ. ಚಾಲ್ತಿ ಸಾಲಿನ ವರ್ಗೀಕರಣವನ್ನು ದೃಢೀಕರಿಸಲು ಅವಕಶ್ಯಕತೆ ಕಂಡು ಬಂದಲ್ಲಿ ಮತ್ತು ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಕಳೆದ ಸಾಲಿನ ಅಂಕಿಗಳನ್ನು ಮರು ಕ್ರೋಢೀಕರಿಸಲಾಗಿದೆ / ಮರುವರ್ಗೀಕರಣ ಮಾಡಲಾಗಿದೆ.

17.02 ಬ್ರಾಕೆಟ್‌ನಲ್ಲಿರುವ ಅಂಕಿಗಳು ಕಳೆದ ಸಾಲಿನ ಅಂಕಿಗಳಾಗಿರುತ್ತವೆ.

### ಅನಿಶ್ಚಿತ ಸಾಲಗಳು

17.03 2007–08 ರಿಂದ 2009–10 ವರೆಗೆ ಡಾ. ಬಿ. ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ರವರು ರೂ. 616.34ಲಕ್ಷಗಳನ್ನು ಖರ್ಚಿನ ನಿಗಮದ ಪಾಲಾಗಿ ಕ್ಲೇಮು ಮಾಡಿರುತ್ತಾರೆ.ಇದನ್ನು ತನ್ನ ಜಿಲ್ಲಾ ಕಛೇರಿಗಳ (ಡಿ ಒ ಗಳ) ಮೂಲಕ ನಿಗಮದ ಕಾರ್ಯಚಟುವಟಿಕೆ ಗಳನ್ನು ನಿರ್ವಹಿಸಲು ಕೇಳಿರುತ್ತದೆ, ಇದರ ಬಗ್ಗೆ ನಿಗಮವು ಇನ್ನೂ ತೀರ್ಮಾನವನ್ನು ತೆಗೆದುಕೊಳ್ಳ ಬೇಕಾಗಿರುತ್ತದೆ. ಇದರ ಬಗ್ಗೆ ಯಾವುದೇ ಸೂಕ್ತ ಕ್ರಮಗಳನ್ನು ಜರುಗಿಸಿರುವುದಿಲ್ಲ,ಯಾಕೆಂದರೆ ಇವೆರಡೂ ಸರ್ಕಾರಿ ನಿಗಮಗಳಾಗಿರುತ್ತವೆ ಹಾಗೂಇದರ ಬಗ್ಗೆ ಸರ್ಕಾರದ ಹಂತದಲ್ಲಿ ತೀರ್ಮಾನಗಳು ಕೈಗೊಳ್ಳಬೇಕಾಗಿದೆ.

| | |
|---|---|
| ಮೂಲಧನದ ಬಗ್ಗೆ ಬದ್ಧತೆಗಳು ಒದಗಿಸಿರುವುದ (ನಿವ್ವಳ ಮುಂಗಡಗಳು) | ಇಲ್ಲ |
| ನಿಗಮದ ಮೇಲಿನ ಕ್ಲೇಮುಗಳನ್ನು ಸಾಲಗಳೆಂದು ಸ್ವೀಕರಿಸಿರುವುದಿಲ್ಲ | ರೂ.616.34 ಲಕ್ಷಗಳು |

### ಜಿಲ್ಲಾ ಕಛೇರಿಗಳಲ್ಲಿ ನಿರ್ವಹಿಸುತ್ತಿರುವ ಲೆಕ್ಕಪುಸ್ತಕಗಳು ಮತ್ತು ಸಾಲಗಳು / ಅನುದಾನದ ಪುಸ್ತಕಗಳು

17.04 ಮೇ 2006ಕ್ಕಿಂತಲೂ ಮುಂಚಿತವಾಗಿ ಗಮವನ್ನು ಸ್ಥಾಪಿಸುವುದಕ್ಕೂ ಮುಂಚೆ ಪರಿಶಿಷ್ಟ ಪಂಗಡದ ಕಲ್ಯಾಣವನ್ನು, ಕಾರ್ಯ ಚಟುವಟಿಕೆಗಳು ಮತ್ತು ಯೋಜನೆ ಗಳನ್ನು ಡಾ. ಬಿ. ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಮೂಲಕ ನಿರ್ವಹಿಸಲಾಗುತ್ತಿತ್ತು. ನಿಗಮವು ಪ್ರತ್ಯೇಕವಾಗಿ ಅಸ್ಥಿತ್ವಕ್ಕೆ ಬಂದ ನಂತರವೂ ಸಹಾ ಪರಿಶಿಷ್ಟ ಪಂಗಡದ ಕ’ಲ್ಯಾಣವನ್ನು, ಕಾರ್ಯ ಚಟುವಟಿಕೆಗಳು ಮತ್ತು ಯೋಜನೆ ಗಳನ್ನು ವ್ಯವಹಾರ ಕ್ಷೇತ್ರದ ಹಂತದಲ್ಲಿ ಡಾ. ಬಿ. ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ತನ್ನ ಡಿ ಒ ಗಳ ಮೂಲಕ ನಿಗಮದ ಪರವಾಗಿ ನಿರ್ವಹಿಸುತ್ತಲೇ ಇದೆ. ಇದರ ಫಲಿತವಾಗಿ ಡಿ ಒ ಗಳು ಡಾ. ಬಿ. ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಹೆಸರಿನಲ್ಲಿರುವ ಲೆಕ್ಕಪುಸ್ತಕಗಳು, ಸಾಲದ ಅರ್ಜಿಗಳು ಮತ್ತು ರಶೀದಿ ಪುಸ್ತಕಗಳನ್ನೊಳಗೊಂಡಂತೆ ಇತ–ರೇ ದಾಖಲೆ ಪುಸ್ತಕಗಳನ್ನು ಉಪಯೋಗಿಸಲಾಗುತ್ತಿದೆ. ಮತ್ತು ಫಲಾನುಭವಿಗಳಿಂದ ಅನುದಾನ, ಅಂಚಿನ ಹಣ ಮತ್ತು ಸಾಲಗಳನ್ನು ವಿತರಿಸಲು ದಾಖಲಾತಿಗಳನ್ನು ಸಹಾ ಡಾ. ಬಿ. ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಹೆಸರಿನಲ್ಲಿಯೇ ಪಡೆಯುತ್ತಿವೆ. ಆದ್ದರಿಂದ ಎಲ್ಲಾ ಹಳೆಯ ದಾಖಲಾತಿಗಳಲ್ಲಿ ನಿಗಮದ ಹೆಸರನ್ನು ಸೇರ್ಪಡಿಸಲು ಹಾಗೂ ನವೀಕರಿಸಲು/ ಎಲ್ಲಾ ಲೆಕ್ಕದ ಪುಸ್ತಕಗಳನ್ನು ನಿರ್ವಹಿಸಲು ಮತ್ತು ದಾಖಲಾತಿಗಳನ್ನು ಹಾಗೂ ಸಾಲದ ದಾಖಲಾತಿಗಳನ್ನು ನಿಗಮದ ಹೆಸರಿನಲ್ಲಿ ನಿರ್ವಹಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

17.05 ಜಿಲ್ಲಾ ಕಛೇರಿಗಳಲ್ಲಿ ಫಲಾನುಭವಿಗಳಿಂದ ಸ್ವೀಕರಿಸಿ ನಿರ್ವಹಿಸುತ್ತಿರುವ ಸಾಲ ಪತ್ರಗಳು ಕೆಲವು ಅಪೂರ್ಣ ವಾಗಿರುತ್ತವೆ ಮತ್ತು ಪೂರ್ತಿ ಮಾಹಿತಿಯನ್ನು ಒಳಗೊಂಡಿ ರುವುದಿಲ್ಲ ಆದ್ದರಿಂದ ಸಾಲದ ಪತ್ರಗಳನ್ನು ನವೀಕರಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

### ಜಿಲ್ಲಾ ಕಛೇರಿಗಳ (ಡಿಒಗಳ) ವ್ಯವಹಾರಗಳನ್ನು ಪ್ರಧಾನ ಕಛೇರಿ (ಹೆಚ್ ಒ) ಪುಸ್ತಕಗಳೊಂದಿಗೆ ಸಮ್ಮಿಳನ ಗೊಳಿಸುವುದು

17.06 ಸ್ವತಂತ್ರವಾಗಿ ಲೆಕ್ಕಪತ್ರಗಳನ್ನು ನಿರ್ವಹಿಸುವ ಅಧಿಕಾರವು ಡಿಒ ಗಳಿಗಿರುವುದಿಲ್ಲ. ಅವು ನಗದು ಪುಸ್ತಕ ಮತ್ತು ಮಾಸಿಕ ಸ್ವೀಕೃತಿಗಳು ಹಾಗೂ ಪಾವತಿಗಳು (ಆರ್&ಪಿ) ತಃಖ್ತೆಗಳನ್ನು ನಿರ್ವಹಿಸುತ್ತಿವೆ. ಡಿಒಗಳಿಂದ ಸ್ವೀಕರಿಸಿದವುಗಳನ್ನು ಹೆಚ್‌ಒ ಪುಸ್ತಕಗಳಲ್ಲಿ ಯಥಾಸ್ಥಿತಿ ಯಲ್ಲಿದ್ದಂತೆ ನಿರ್ವಹಿಸುತ್ತಿವೆ.

17.07 ಸಾಲ, ಅಂಚಿನ ಹಣ, ಅನುದಾನ ಇವುಗಳ ವಿತರಣೆಯನ್ನು ಖರ್ಚಿನ ಬಾಬ್ತಿನಲ್ಲಿ ಪರಿಗಣಿಸ ಲಾಗು ವುದು ಮತ್ತು ಫಲಾನುಭವಿಗಳಿಂದ ಅಸಲು, ಬಡ್ಡಿ, ಇತ್ಯಾದಿ ಸ್ವೀಕೃತಿಗಳನ್ನು ಮತ್ತು/ಅಥವಾ ಇತರೇ ಸ್ವೀಕೃತಿ ಗಳನ್ನು ಮತ್ತು ಫಲಾನುಭವಿಗಳ ವಂತಿಕೆಗಳು ಇತ್ಯಾದಿಗಳನ್ನು ಡಿಒಗಳಿಂದ ನೀಡಿದ ಮಾಹಿತಿ ಅಥವಾ ಡಿಒಗಳಿಂದ ಪಡೆದ ಆರ್‌ಅಂಡ್‌ಪಿ ತಃಖ್ತೆಗಳಲ್ಲಿ ಪ್ರತಿ ಫಲಿಸಿದಂತೆ ದಾಖಲಿಸಲಾಗುವುದು.

17.08 ಹಣಕಾಸಿನ ವ್ಯವಹಾರಗಳಲ್ಲಿ ಕೆಲವು ಅವ್ಯವಸ್ಥೆಗಳು ಗಮನಕ್ಕೆ ಬಂದಿದ್ದು ಹಾಗೂ ರಾಯಚೂರು ಜಿಲ್ಲಾ ಕಛೇರಿಯಲ್ಲಾದ ಹಣದ ದುರುಪಯೋಗದ ಬಗ್ಗೆ ಆಂತರಿಕ ತಂಡದಿಂದ ಸ್ವೀಕರಿಸಲಾದ ದೂರಿನಿಂದಾಗಿ ದಿನಾಂಕ:01.04.2010 ರಿಂದ 17.06.2013 ರ ಅವಧಿಯವರೆಗೆ ವಿಷಯವನ್ನು (ತನಿಖೆಗೆ) ನಿಗಮವು ಘನ ಲೋಕಾಯುಕ್ತಕ್ಕೆ ಒಪ್ಪಿಸಿರುತ್ತದೆ. ಅವರು ತನಿಖೆಯನ್ನು ಪ್ರಾರಂಭಿಸಿದ್ದು ಅಲ್ಲಿರುವ ಲೆಕ್ಕ ಪುಸ್ತಕಗಳನ್ನು ವಶಪಡಿಸಿಕೊಂಡಿರುತ್ತಾರೆ. ತನಿಖೆಯು ಇನ್ನು ನಡೆಯುತ್ತಿರುವುದರಿಂದ 2012–13 ರ ಜಿಲ್ಲಾ ಕಛೇರಿಯ ಎಲ್ಲಾ 7 ಯೋಜನೆಗಳ ಬ್ಯಾಂಕ್ ಲೆಕ್ಕಗಳ ಹಣಕಾಸು ವಹಿವಾಟನ್ನು ಲೆಕ್ಕಿಕರಿಸಲಾಗಿರುವುದಿಲ್ಲ. ಟಿಪ್ಪಣಿ ಸಂಖ್ಯೆ:11.02(iii) ರಲ್ಲಿ ಹೇಳಿದಂತೆ 7 ಯೋಜನೆಗಳ ರೂ.6,95,29,473/– ಗಳು ದಿನಾಂಕ 01.04.2012ಕ್ಕೆ ಬಾಕಿ ಇದ್ದು ಇವುಗಳನ್ನು ರಾಯಚೂರು

ಜಿಲ್ಲಾ ಬ್ಯಾಂಕ್ ಖಾತೆಯಿಂದ ಕೇಂದ್ರ ಕಛೇರಿಗೆ ಪ್ರಸಕ್ತ ಸಾಲಿನಲ್ಲಿ ವರ್ಗಾಯಿಸಲಾಗಿದ್ದು, ಚೆಕ್‌ಗಳ ಅವಧಿ ಮುಗಿದಿರುವ ನಿವ್ವಳ ಮೊತ್ತ ಹಾಗೂ ದಿನಾಂಕ 31.03.2013ರ ಅಂತ್ಯಕ್ಕೆ ವಸೂಲಾತಿ ಖಾತೆಯಿಂದ ಬಾಕಿ ಇರುವ ರೂ.5,36,394/– ಗಳನ್ನು ಬಿಟ್ಟು, ಉಳಿದ ಎಲ್ಲಾ ಮೊತ್ತವನ್ನು ಜಿಲ್ಲಾ ವ್ಯವಸ್ಥಾಪಕರು ರಾಯಚೂರು ಜಿಲ್ಲೆ ಇವರಿಂದ ಬರಬೇಕಾದ ಮೊತ್ತವೆಂದು ಲೆಕ್ಕಿಸಲಾಗಿದೆ. ಹಣಕಾಸಿನ ಸ್ಥಿತಿಗತಿಗಳ ಮೇಲೆ ಏನಾದರು ಪರಿಣಾಮವಿದ್ದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಕಂಡುಹಿಡಿಯಲು ಸಾಧ್ಯವಿರುವುದಿಲ್ಲ. ಹಾಗೂ ದುರುಪಯೋಗವಾದ ಹಣವನ್ನು ವಸೂಲು ಮಾಡಲು ಕ್ರಮವೇನಾದರೂ ಇದ್ದಲ್ಲಿ ಲೆಕ್ಕಪತ್ರಗಳ ಹೊಂದಾಣಿಕೆಯನ್ನು ತನಿಖಾ ವರದಿಯ ಆಧಾರದ ಮೇಲೆ ಕ್ರಮಕೈಗೊಳ್ಳಲಾಗುವುದು.

### ಶಿಲ್ಕುಗಳ ದೃಢೀಕರಣ

17.09 ವಿವಿಧ ರೀತಿಯ ಚಾಲ್ತಿ ಆಸ್ತಿಗಳ ಹಾಗೂ ಚಾಲ್ತಿ ಹೊಣೆಗಾರಿಕೆಗಳ ಶಿಲ್ಕುಗಳ ದೃಢೀಕರಣ ದೊರೆತಿರುವುದಿಲ್ಲ.

### ಶಾಸನಬದ್ಧ ಸಮ್ಮತಿಗಳು

17.10 ನಿಗಮವು ನಾನ್ ಬ್ಯಾಂಕಿಂಗ್ ಫೈನಾನ್ಸಿಯಲ್ ಕಾರ್ಪೋರೇಷನ್ (ಎನ್‌ಬಿಎಫ್‌ಸಿ) ಎಂದು ಭಾರತೀಯ ರಿಜರ್ವ್ ಬ್ಯಾಂಕ್ ಕಾಯ್ದೆ, 1934 ರ ಕಲಂ 45–1ಎ ಅಡಿಯಲ್ಲಿ ನೋಂದಣಿ ಮಾಡಿಸಲುಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

17.11 ಪ್ರಾಯೋಗಿಕವಾದ ಕಷ್ಟಗಳಿಂದಾಗಿ, ದೀರ್ಘಾವಧಿ ಅಂಶಗಳನ್ನು ವಿಂಗಡಿಸಿ ಹೊಣೆಗಾರಿಕೆಗಳಡಿಯಲ್ಲಿ ತೋರಿಸುವುದು ಸಾಧ್ಯವಿಲ್ಲ. ಅಂದರೆ ಇಎಂಡಿ, ಭದ್ರತಾ ಠೇವಣಿ ಮತ್ತು ರಿಟೆನ್‌ಷನ್ ಹಣ ಇವುಗಳು ಗುತ್ತಿಗೆ ದಾರರಿಗೆ ಪಾವತಿ ಮಾಡಬೇಕಾದದ್ದು ಮತ್ತು ಫಲಾನುಭವಿಗಳಿಗೆ ಪಾವತಿಮಾಡಬೇಕಾದ ಸಾಲಗಳು ಇವು ಚಾಲ್ತಿ ಆಸ್ತಿಗಳು, ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಒಳಗೊಂಡಿರುತ್ತದೆ. ಇವುಗಳನ್ನು ಪುನರ್ ವಿಂಗಡಿಸಿರುವ ಅನುಸೂಚಿ 6 ರಂತೆ ಪರಿಗಣಿಸಲು ಅಗತ್ಯವಿರುತ್ತದೆ.

### ಎಸ್‌ಎಸ್‌ಐ ಯೂನಿಟ್‌ಗಳಿಗೆ ಬಾಕಿಗಳು

17.12 ನಿಗಮವು ತನ್ನ ಎಲ್ಲಾ "ಸರಬರಾಜುದಾರ"ರಿಂದ ಮೈಕ್ರೋ, ಸ್ಮಾಲ್‌ಅಂಡ್ ಮೀಡಿಯಂ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ ಆಕ್ಟ್,2006 ರ ಅಡಿಯಲ್ಲಿ ಅವರ ಸ್ಥಿತಿಗತಿಗಳ ಬಗ್ಗೆ ಯಾವುದೇ ಮಾಹಿತಿಯು ಸ್ವೀಕರಿಸ ಲಾಗಿರುವುದಿಲ್ಲ. ಅದರ ಗೈರಿನಲ್ಲೇ ಕಾಯಿದೆ ಅಡಿಯಲ್ಲಿ "ಸರಬರಾಜುದಾರ"ರ ಸ್ಥಿತಿಗತಿ ಗಳನ್ನು ಕಂಪನಿ ಯಲ್ಲಿ ದೊರೆಯುವ ಮಾಹಿತಿಯ ಮೇರೆಗೆ ಗುರ್ತಿಸಿ ನಿರ್ಧರಿಸ ಬಹುದಾಗಿದೆ.ನಿಗಮವು ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಮೈಕ್ರೋ, ಸ್ಮಾಲ್ ಅಂಡ್ ಮೀಡಿಯಂ ಎಂಟರ್‌ಪ್ರೈಸಸ್‌ಗೆ ದಿನಾಂಕ 31.03.2013 ರ ಅಂತ್ಯಕ್ಕೆ ಅಥವಾ ಚಾಲ್ತಿ ಸಾಲಿನಲ್ಲಿ 45 ದಿನಗಳಿಗಿಂತಲೂ ಹೆಚ್ಚು ಅವಧಿಗೆ ಯಾವುದೇ ಬಾಕಿಗಳು ಇರುವುದಿಲ್ಲ. ಮತ್ತು ಸಂಸ್ಥೆಯು ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಬಡ್ಡಿ ಅಥವಾ ಬಡ್ಡಿಯ ಮೇಲಿನ ಬಾಕಿಗಳೆಂದು ಯಾವುದೇ ಕ್ಲೇಮುಗಳು ಇರುವುದಿಲ್ಲ.

### ಆದಾಯ ತೆರಿಗೆ

17.13 ನಿಗಮವನ್ನು ಕರ್ನಾಟಕ ಸರ್ಕಾರವು ಪರಿಶಿಷ್ಟ ಪಂಗಡದ ಸದಸ್ಯರ ಏಳಿಗೆಗಾಗಿ ಸ್ಥಾಪಿಸಿ ರುವುದರಿಂದ ನಿಗಮದ ಆದಾಯವು ಆದಾಯ ತೆರಿಗೆ ಕಾಯಿದೆ, 1961 ರ ಕಲಂ 10(26ಬಿ) ಅಡಿಯಲ್ಲಿ ವಿನಾಯ್ತಿಯನ್ನು ಹೊಂದಿರುತ್ತದೆ. ಆದ್ದರಿಂದ ಯಾವುದೇ ತೆರಿಗೆ ಬಾಕಿಗಳು ಇರುವುದಿಲ್ಲ.

### ಪರಿಮಾಣತ್ಮಾಕ ಮಾಹಿತಿ

17.14 ನಿಗಮವು ಯಾವುದೇ ತಯಾರಿಕಾ ಚಟುವಟಿಕೆ ಗಳಲ್ಲಿ ತೊಡಗದಿಲ್ಲದಿರುವುದರಿಂದ' ಕಂಪನಿಗಳ ಕಾಯ್ದೆ, 1956ರ ಅನುಸೂಚಿ 6ರ ಪ್ಯಾರಾ 3, 4ಎ, 4ಸಿ ಮತ್ತು 4ಡಿ ಅಡಿಯಲ್ಲಿ ಮಾಹಿತಿಯು ಅನ್ವಯವಾಗುವುದಿಲ್ಲ.

ಮಂಡಳಿಯ ಪರವಾಗಿ, ನಮ್ಮ ವರದಿಯ ದಿನಾಂಕದಂತೆ

**ಬದರಿ, ಮಧುಸೂಧನ್ ಅಂಡ್ ಶ್ರೀನಿವಾಸನ್**
**ಚಾರ್ಟರ್ಡ್ ಅಕೌಂಟೆಂಟ್ಸ್**
ಎಫ್‌ಆರ್ ನಂ.005389ಎಸ್
ಸಹಿ/–
(ಟಿ.ವಿ. ಸುದರ್ಶನ್)
ಪಾಲುದಾರರು
ಸದಸ್ಯತ್ವ ಸಂಖ್ಯೆ: 019108
ನಮ್ಮ ವರದಿಯ ದಿನಾಂಕದಂತೆ

| ಸಹಿ/– | ಸಹಿ/– | ಸಹಿ/– |
|---|---|---|
| (ಕೆ.ಎಸ್ ಮೃತ್ಯುಂಜಯ) | (ರಾಜೇಶ್ವರಿ ಎಲ್) | (ಹೆಚ್.ಆಂಜನೇಯ) |
| ವ್ಯವಸ್ಥಾಪಕ ನಿರ್ದೇಶಕರು | ನಿರ್ದೇಶಕರು | ಅಧ್ಯಕ್ಷರು |

ಸ್ಥಳ: ಬೆಂಗಳೂರು
ದಿನಾಂಕ: 11.09.2014

## ಕಂಪನಿಗಳ ಕಾಯ್ದೆ, 1956 ಷೆಡ್ಯೂಲ್ 6ರ ಭಾಗ 4 ರಂತೆ ಮಾಹಿತಿ
## ಜಮಾ ಖರ್ಚಿನ ತ:ಖ್ತೆಯ ಸಂಗ್ರಮ ಮತ್ತು ಕಂಪನಿಯ ಸಾಮಾನ್ಯ ವ್ಯವಹಾರದ ವಿವರಗಳು

| | |
|---|---|
| **I. ನೋಂದಣಿ ವಿವರಗಳು** | U 8 5 3 1 0 K A 2 0 0 6 S G C 0 4 0 0 5 5 |
| ರಾಜ್ಯದ ಸಂಕೇತ | 0 0 0 8 |
| ಜಮಾ ಖರ್ಚಿನ ದಿನಾಂಕ | 3 1 0 3 2 0 1 3 |
| **II. ಪ್ರಸ್ತುತ ವರ್ಷದಲ್ಲಿ ಪಡೆದ ಬಂಡವಾಳ (ಮೊತ್ತ ರೂ. ಲಕ್ಷಗಳಲ್ಲಿ)** | |
| ಸಾರ್ವಜನಿಕ ವಿತರಣೆ | ಇಲ್ಲ |
| ಹಕ್ಕು ವಿತರಣೆ | ಇಲ್ಲ |
| ಬೋನಸ್ ವಿತರಣೆ | ಇಲ್ಲ |
| ಖಾಸಗಿ ನಿಯೋಜನೆ | ಇಲ್ಲ |
| **III. ನಿಧಿಗಳ ಸಂಗ್ರಹಣೆ ಮತ್ತು ವಿನಿಯೋಗ ಸ್ಥಿತಿ (ಮೊತ್ತ ರೂ.ಲಕ್ಷಗಳಲ್ಲಿ)** | |
| ಒಟ್ಟು ಆಸ್ತಿಗಳು | 24859.96 |
| ಒಟ್ಟು ಹೊಣೆಗಳು | 24859.96 |
| ನಿಧಿಯ ಮೂಲಗಳು | |
| ಪಾವತಿಯಾದ ಬಂಡವಾಳ | 382.47 |
| ಷೇರು ಠೇವಣಿ | 1976.30 |
| ಮೀಸಲು ಮತ್ತು ಮತ್ತು ಹೆಚ್ಚಿನದು | 2445.77 |
| ಹಾಲಿ ಸಾಲಗಳು | 18471.33 |
| ಭದ್ರ ರಹಿತ ಸಾಲಗಳು | 3560.37 |
| ನಿಧಿಗಳ ನಿಯೋಜನೆ | |
| ನಿವ್ವಳ ಸ್ಥಿರ ಆಸ್ತಿಗಳು | 94.92 |
| **ಹೂಡಿಕೆಗಳು** | |
| ನಿವ್ವಳ ಚಾಲ್ತಿ ಆಸ್ತಿಗಳು | 4230.82 |
| ಕ್ರೂಢೀಕೃತ ನಷ್ಟ | 0.00 |
| **IV. ಕಂಪನಿಯ ಕಾರ್ಯಕ್ಷಮತೆ ( ಮೊತ್ತ ರೂ.ಲಕ್ಷಗಳಲ್ಲಿ)** | |
| ವಹಿವಾಟು/ ಆದಾಯ | 1156.79 |
| ಒಟ್ಟು ವೆಚ್ಚ | 458.16 |
| ತೆರಿಗೆ ಮುನ್ನ ಲಾಭ | 698.63 |
| ತೆರಿಗೆ ನಂತರ ಲಾಭ | 698.63 |
| ಪ್ರತಿ ಷೇರಿನ ಗಳಿಕೆ | 182.66 |
| ಲಾಭಾಂಶ ಇಲ್ಲ | ಇಲ್ಲ |

**V. ನಿಗಮದ ಪ್ರಮುಖ ಉತ್ಪನ್ನಗಳು/ನಿಗಮದ ಸೇವೆಗಳ ಸಾಮಾನ್ಯ ಹೆಸರು**

**(ಹಣಕಾಸು ನಿಯಮಗಳ ಪ್ರಕಾರ)**

ಐಟಂ ಕೋಡ್ ಸಂಖ್ಯೆ: (ಐಟಿಸಿ ಕೋಡ್) ಪರಿಶಿಷ್ಟ ಪಂಗಡಗಳ ಉನ್ನತೀಕರಣಕ್ಕಾಗಿ ಹಣಕಾಸು ಸಹಾಯ

ಮಂಡಳಿಯ ಪರವಾಗಿ

| | | |
|---|---|---|
| ಸಹಿ/– | ಸಹಿ/– | ಸಹಿ/– |
| (ಕೆ.ಎಸ್ ಮೃತ್ಯುಂಜಯ) | ( ಸದಿಯಾ ಸುಲ್ತಾನ) | ( ಬಸವರಾಜ್.ಎಸ್.ಸಿ) |
| ವ್ಯವಸ್ಥಾಪಕ ನಿರ್ದೇಶಕರು | ನಿರ್ದೇಶಕರು | ಅಧ್ಯಕ್ಷರು |

ಸ್ಥಳ : ಬೆಂಗಳೂರು
ದಿನಾಂಕ : 06.12.2014